# ಪಾಠಶಾಲಾ

ಜೂನ್ 2003 ತಿಂಗಳ ಪತ್ರಿಕೆ

- ಬಹುರಾಷ್ಟ್ರೀಯ ಕಂಪನಿಗಳ ಕಪಿ ಮುಷ್ಠಿಯಲ್ಲಿ ಮೆಕ್ಸಿಕೊ ಮಹಿಳೆಯರು
- 'ಕನಿಷ್ಠ ವೇತನ ನಮ್ಮ ಹಕ್ಕು'
- ವರ್ತುಲ
- ಇರಾಕ್ ಕುರಿತ ಅಂತರಾಷ್ಟ್ರೀಯ ಮಹಿಳಾ ಐಕ್ಯರಂಗ

  ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿ ಕೋಫಿ ಅನ್ನಾನ್‌ಗೆ ಬಹಿರಂಗ ಪತ್ರ
- ನಾಲ್ಕು ಹನಿಗಳು
- ವಿವಾಹಬಾಹಿರ ಸಂಬಂಧಗಳಲ್ಲಿ ಲಿಂಗ ಸಮಾನತೆಯ ಪ್ರಶ್ನೆ :

  ಪಾತರದವರನ್ನು ಜೋಗತಿಯರನ್ನು ಅನುಲಕ್ಷಿಸಿ

# ಮಾನಸ

ತಿಂಗಳ ಪತ್ರಿಕೆ ಜೂನ್ 2003
ಸಂಪುಟ 18 ಸಂಚಿಕೆ : 5





**ವಿಳಾಸ**
**" ಮಾನಸ "** ತಿಂಗಳ ಪತ್ರಿಕೆ
ಪಂಚಾಯಿತಿ ರಸ್ತೆ
ಕಾಡುಗೋಡಿ ಪೋಸ್ಟ್
ಬೆಂಗಳೂರು - 560 067
**ಇ-ಮೈಲ್ :** manasapathrike@yahoo.co.in



**ಸೂಚನೆ :** ಸೂಚನೆ: ಬಿಡಿಪ್ರತಿ 10-00 ರೂ.
ವಾರ್ಷಿಕ ಚಂದಾ 100-00 ರೂ.
ಸಂಸ್ಥೆಗಳಿಗೆ 150-00 ರೂ.

ಒಂದು ವಿಶೇಷ ಸಂಚಿಕೆಯೊಂದಿಗೆ
ಒಟ್ಟು ಹನ್ನೊಂದು ಸಂಚಿಕೆಗಳು


## ಈ ಸಂಚಿಕೆಯಲ್ಲಿ...






ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ
ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು - 560 067

# ಸಂಪಾದಕೀಯ



ಸಾಹಿತಿ ಭೈರಪ್ಪನವರು ಬೌದ್ಧಧರ್ಮ ಜೀವ ಪರವಾದುದಲ್ಲ ಎಂದು ಹೇಳಿ ಅನಾವಶ್ಯಕ ಗೊಂದಲವನ್ನು ಎಬ್ಬಿಸಿದ್ದಾರೆ. ಜಾಗತೀಕರಣ ಹಾಗೂ ಮೂಲಭೂತವಾದ ಎರಡು ತಳಕು ಹಾಕಿಕೊಂಡು ಮೇಲ್ಜಾತಿ, ವರ್ಗಗಳ ಕ್ರೂಡೀಕರಣಕ್ಕೆ ಹಾಗೂ ಮಧ್ಯಮ, ಕೆಳಜಾತಿ ವರ್ಗದ ಧೂಳಿ ಪಟಕ್ಕೆ ರಾಜಕೀಯರಂಗವನ್ನು ಸಜ್ಜುಗೊಳಿಸುತ್ತಿರುವ ಈ ಸಂದರ್ಭದಲ್ಲಿ ಭೈರಪ್ಪನವರು ಯಾವ ಅಳುಕು ಇಲ್ಲದೆ ರಾಜಕೀಯವಾಗಿ ಬೌದ್ಧ ಧರ್ಮವನ್ನು ಹೀಗೆಳೆದಿರುವುದು ಶೋಚನಿಯವೇ ಸರಿ.

ಧರ್ಮಶ್ರೀ, ವಂಶವೃಕ್ಷ, ತಬ್ಬಲಿಯು ನೀನಾದೆ ಮಗನೆ ಮುಂತಾದ ಕಾದಂಬರಿಗಳಲ್ಲಿ ಸ್ತ್ರೀಯರನ್ನು ಸನಾತನ ಧರ್ಮದ ಚೌಕಟ್ಟಿನೊಳಗೆ ಬಂಧಿಸಿಡಲು ಪ್ರಯತ್ನ ಪಟ್ಟಿರುವ ಭೈರಪ್ಪನವರು 'ತಂತು' ಕಾದಂಬರಿಯಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ 'ಸ್ತ್ರೀವಾದ' ವನ್ನು ಲೇವಡಿ ಮಾಡಿದ್ದಾರೆ. ಸ್ತ್ರೀಯರ ಬಗೆಗಿನ ಇವರ ನಿಲುವು ಇದರಿಂದ ವ್ಯಕ್ತವಾಗುತ್ತದೆ.

ಹಿಂದೂ ಧರ್ಮವನ್ನು ಪುನರುತ್ಥಾನಗೊಳಿಸುವ ಹಂತದಲ್ಲಿ ಆದಿವಾಸಿಗಳು ಹಾಗೂ ದಲಿತರನ್ನು ಮುಂಚುಣಿಯಲ್ಲಿಟ್ಟು ಅವರ ಕೈಯಿಂದಲೇ ಹಿಂಸೆ/ಕ್ರೌರ್ಯ ಎಸಗಿಸುವ ಒಂದು ವ್ಯವಸ್ಥಿತ ಸಂಚು, ಹುನ್ನಾರ ಹಿಂದೂ ಧರ್ಮದ ವಕ್ತಾರರಿಂದ ನಡೆಯುತ್ತಿದೆ. ಈ ವಕ್ತಾರರ 'ಮುಖವಾಣಿ' ಎನ್ನುವಂತೆ ಬೌದ್ಧ ಧರ್ಮದ ಮೇಲೆ ಹರಿಹಾಯ್ದಿರುವ ಭೈರಪ್ಪನವರ ನಿಲುವು ದಲಿತರನ್ನು ಹಿಂದೂಧರ್ಮದ ಚೌಕಟ್ಟಿನೊಳಗೇ ಇಟ್ಟುಕೊಂಡು ಮತೀಯವಾದದ ಕ್ರೌರ್ಯಕ್ಕೆ ಅವರನ್ನು ಬಳಸುವ ತಂತ್ರ ವಿನ್ಯಾಸ ಎಂಬ ಎಚ್ಚರಿಕೆಯನ್ನು ನಾವೆಲ್ಲರೂ ಹೊಂದಿರುವುದು ಅಗತ್ಯವಾಗಿದೆ.

**ಹಲವಾರು ಕಾರಣಗಳಿಂದ ಮಾನಸ ಪತ್ರಿಕೆಯ ಪ್ರಕಟಣೆ ತಡವಾಗಿದೆ. ಜೂನ್ ತಿಂಗಳ ಸಂಚಿಕೆ ಈಗ ಬಂದಿದೆ. ಓದುಗರು ಸಹಕರಿಸಬೇಕು. ಜೊತೆಗೆ ಮಾನಸ ದ ನಿರಂತರತೆ ಕಾಯಲು ನಿಮ್ಮ ಸಹಕಾರ ಅಗತ್ಯ. ದಯವಿಟ್ಟು ಮಾನಸ ಕ್ಕೆ ಲೇಖನ, ವಿಮರ್ಶೆ ಕಳಿಸಿಕೊಡಿ. ಚಂದಾದಾರರಾಗಿ ಉಳಿದ ಸಂಚಿಕೆಗಳನ್ನು ಜರೂರಾಗಿ ತರಲು ತಮ್ಮ ಸಹಕಾರ - ಸಲಹೆ ಅಗತ್ಯ.**

**- ಸಂಪಾದಕ ಮಂಡಳಿ**

# ಬಹುರಾಷ್ಟ್ರೀಯ ಕಂಪನಿಗಳ ಕಪಿ ಮುಷ್ಠಿಯಲ್ಲಿ ಮೆಕ್ಸಿಕೊ ಮಹಿಳೆಯರು

"ನಿಮ್ಮ ಪಾಲಿನ ರೊಟ್ಟಿಯನ್ನು ಪಡೆದು ತಿನ್ನಿ..... ಅಮೆರಿಕದಲ್ಲಿ ವಾಸಮಾಡಿ. ಮೆಕ್ಸಿಕೊ ನೌಕರರಿಗೆ ದಿನಕ್ಕೆ 6.64 ಡಾಲರುಗಳನ್ನು (ಸುಮಾರು 300 ರೂ.ಗಳು) ಪಾವತಿ ಮಾಡಿ"

- ಇ ಐ ಎಂಬ ಪ್ರಸಿದ್ಧ ವ್ಯಾಪಾರೀ ಪ್ರಕಟಣೆಯೊಂದರ ಜಾಹಿರಾತು.

ಮೆಕ್ಸಿಕೊ ಎಂದರೆ ಪ್ರವಾಸಿಗಳಿಗೆ ಅಗ್ಗವಾಗಿ ಕಳೆಯುವ ರಜಾದಿನಗಳು, ಮಸಾಲೆ ಆಹಾರ ಮತ್ತು ಸೋಬ್ರರೋಸ್‌ಗಳ ಸ್ಥಳ ಎಂಬ ಭಾವನೆ ಇದೆ. ಆದರೆ ಅಮೆರಿಕದ ವ್ಯಾಪಾರೀ ದೃಷ್ಟಿಗೆ ಮೆಕ್ಸಿಕೊ ಎಂದರೆ ಅಗ್ಗದ ಶ್ರಮ ಶಕ್ತಿಯಾಗಿ ಕಾಣುತ್ತದೆ. ಇಲ್ಲಿಯ ಈಶಾನ್ಯ ಪ್ರದೇಶದ ಕೃಷಿ ಉತ್ಪನ್ನಗಳ ವ್ಯಾಪಾರವು ಗಡಿ ಪ್ರದೇಶಕ್ಕೆ ಕೂಲಿಗಾಗಿ ನುಸುಳಿ ಬರುವ ಮೊಜಡೋಸ್ ಎಂಬ ಶ್ರಮಿಕರನ್ನು ಅವಲಂಬಿಸುತ್ತಾ ಬಂದಿದೆ.

ಅಮೆರಿಕಕ್ಕೆ ಪ್ರವಾಹದಂತೆ ಹೋಗುತ್ತಿದ್ದ ಬ್ರೆಸರೋ (ಬ್ರೆಸರೊಗಳು ಒಪ್ಪಂದಕ್ಕೊಳಪಟ್ಟ ವಲಸೆ ಕಾರ್ಮಿಕರು) ಗಳನ್ನು 1942 ರಿಂದ 1964 ರವರೆಗೆ ಬ್ರೆಸರೊ ಪ್ರೊಗ್ರಾಂ ಎಂಬ ಕಾರ್ಯಕ್ರಮ ಹಾಕಿಕೊಳ್ಳುವ ಮೂಲಕ ನಿಯಂತ್ರಿಸಲಾಯಿತು. ಈ ಕಾರ್ಯಕ್ರಮ ನಿಂತುಹೋದಾಗ ಸುಮಾರು 2 ಲಕ್ಷ ಮಂದಿ ತೋಟದ ಕಾರ್ಮಿಕರು ತಮ್ಮ ಉದ್ಯೋಗಗಳನ್ನು ಕಳೆದು ಕೊಂಡರು. ಇದರಿಂದಾಗಿ ಮೆಕ್ಸಿಕಾಲಿ ಮತ್ತು ಸಿಯುದಾದ್ ಜುವಾರೆಜ್‌ಗಳಂಥ ಗಡಿಪ್ರದೇಶದ ನಗರಗಳ ಶ್ರಮಿಕ ವರ್ಗದಲ್ಲಿ ನಿರುದ್ಯೋಗದ ಪ್ರಮಾಣ ಶೇ. 50ಕ್ಕೆ ತಲುಪಿತು. ಮೆಕ್ಸಿಕೊ ಸರಕಾರವು ತನ್ನ ದೇಶದ ನಿರುದ್ಯೋಗದ ತುರ್ತು ಸಮಸ್ಯೆಗೆ ಪರಿಹಾರದ ಹುಡುಕಾಟದಲ್ಲಿ ತೊಡಗಬೇಕಾದ ಆತಂಕದಲ್ಲಿತ್ತು. ಇದೇ ಸಮಯದಲ್ಲಿ ಹಾಂಗ್‌ಕಾಂಗ್ ಮತ್ತು ಟೈವಾನ್ ಗಳಲ್ಲಿರುವ ಹೊಸದಾದ ಜೋಡಣಾ ಕಾರ್ಖಾನೆಗಳಿಗೆ ಭೇಟಿ ನೀಡುವಂತೆ ಉದ್ಯಮ ಮತ್ತು ವಾಣಿಜ್ಯಗಳ ಕಾರ್ಯದರ್ಶಿಗೆ ಆಹ್ವಾನ ಬಂತು. ಅದಕ್ಕೆ ಮೆಕ್ಸಿಕೊ ಸರಕಾರವು ಬಹಳ ಹುರುಪಿನಿಂದ ಪ್ರತಿಕ್ರಿಯಿಸಿತು. ಅದರ ಫಲವಾಗಿ, ಅಗ್ಗದ ಶ್ರಮಶಕ್ತಿ ಬಳಕೆ ಮತ್ತು ನಿರುದ್ಯೋಗಿಗಳಿಗೆ ಉದ್ಯೋಗ ಸೃಷ್ಟಿಗಳೆರಡೂ ಸಾಧ್ಯವಾಗುವಂತೆ ಅಮೆರಿಕ ಮೆಕ್ಸಿಕೊ ಗಡಿಪ್ರದೇಶದಲ್ಲಿ ಒಂದು ಮುಕ್ತ ಮಾರುಕಟ್ಟೆ ವಲಯದ ನಿರ್ಮಾಣ ಯೋಜನೆಯ ಪ್ರಸ್ತಾಪವನ್ನು ಅಮೆರಿಕದ ಉದ್ಯಮಿಗಳು ಮೆಕ್ಸಿಕೊ ದೇಶದ ಮುಂದಿಟ್ಟರು. (ಮರಿಯೊ ಅರ್ರಿಯೊಲ ವುಗ್: 1980 : ಪು.50) [32] ಈ ಯೋಜನೆಯ ಒಪ್ಪಂದದಲ್ಲಿ ತಂತ್ರಜ್ಞಾನ ಮತ್ತು ಕೌಶಲಗಳೂ ಸೇರಿರುತ್ತವೆಂದು ಮೆಕ್ಸಿಕೊ ಅಧಿಕಾರಿಗಳು ಭಾವಿಸಿದರು. ಆದರೆ ಅದು ಸುಳ್ಳಾಗಿತ್ತು. 1965 ರಲ್ಲಿ ಎರಡೂ ದೇಶಗಳ ಗಡಿ ಪ್ರದೇಶಗಳಲ್ಲಿ ಗಡಿ ಉದ್ಯಮೀಕರಣ ಕಾರ್ಯಕ್ರಮ (Border Industrialisaion Program (BIP)) ಆರಂಭವಾಯಿತು. ಎರಡೂ ದೇಶಗಳ ಗಡಿಗಳಲ್ಲಿ ಒಂದೊಂದರಂತೆ ಅವಳಿ ಕೈಗಾರಿಕಾ ಘಟಕಗಳಿರುವ ಮಖಿಲಡೊರ ಹುಟ್ಟಿಕೊಂಡಿತು. ಶ್ರಮಪ್ರಧಾನವಾದ ಕೆಲಸಗಳು ಮೆಕ್ಸಿಕೊದಲ್ಲಿ ನಡೆಯುತ್ತಿದ್ದವು. ಮೊದಲೇ ಕತ್ತರಿಸಲಾದ ಉಡುಪು ಬಟ್ಟೆಗಳು, ಇಲೆಕ್ಟ್ರಾನಿಕ್ ಬಿಡಿಭಾಗಗಳು, ಕೃತಕ ಹೂವುಗಳು ಮತ್ತಿತರ ವಸ್ತುಗಳು ಅಮೆರಿಕದ ಕೈಗಾರಿಕಾ ಘಟಕಗಳಿಂದ ಮಖಿಲಡೊರಕ್ಕೆ ಬರುತ್ತಿದ್ದವು. ಅವುಗಳನ್ನು ಹೊಲೆಯುವುದು, ವೆಲ್ಡಿಂಗ್ ಮಾಡುವುದು, ಅಂಟಿಸುವುದು, ಜೋಡಿಸುವುದು ಮುಂತಾದ ಕೆಲಸಗಳು ಮೆಕ್ಸಿಕೋದಲ್ಲಿ ನಡೆಯುತ್ತಿದ್ದವು. ಅನಂತರ ಅವುಗಳನ್ನು ಮತ್ತೆ ಹಡಗಿನಲ್ಲಿ ಅಮೆರಿಕಕ್ಕೆ ವಿತರಣೆಗಾಗಿ ಕಳುಹಿಸಲಾಗುತ್ತಿತ್ತು.

ಮೆಕ್ಸಿಕೊ ಸರಕಾರ ವಿದೇಶೀ ಕಂಪನಿಗಳಿಗೆ ಎಂದೂ ಕಾಣದ ಹಣಕಾಸಿನ ಪ್ರೋತ್ಸಾಹಗಳನ್ನು ನೀಡಿತು. ಕಾರ್ಖಾನೆಗಳಿಗೆ ನೂರಕ್ಕೆ ನೂರರಷ್ಟು ವಿದೇಶೀ ಮಾಲೀಕತ್ವ ಮತ್ತು ನಿರ್ವಹಣೆಯ ಜವಾಬ್ದಾರಿಗಳನ್ನು ಹೊಂದಲು ಅವಕಾಶ ನೀಡಿತು. ಲಾಭ ಮತ್ತು ಮಾರಾಟಗಳಿಗೆ ಕಡಿಮೆ ತೆರಿಗೆಗಳನ್ನು ವಿಧಿಸಿತು. ಕೆಲವು ರಾಜ್ಯಗಳಿಗೆ ಸಂಪೂರ್ಣ ತೆರಿಗೆ ವಿನಾಯಿತಿ ನೀಡಿತು. ಭೂಮಿಯ ಖರೀದಿ ಅಥವಾ ಅಗತ್ಯ ಕರಾರುಗಳೊಂದಿಗೆ ಗೇಣಿಗೆ ಪಡೆಯುವುದು ಸಾಧ್ಯವಿತ್ತು. ಅನಧಿಕೃತವಾಗಿ ವಹಿವಾಟನ್ನು ನೋಡಿಕೊಳ್ಳಲು ಹಾಗೂ ಕಾರ್ಮಿಕರಿಗೆ ಸಂಬಂಧಪಟ್ಟ ವಿಷಯಗಳ ನಿರ್ವಹಣೆ ಮಾಡಲು ಕಂಪನಿಗಳಿಗೆ ಸಂಪೂರ್ಣ ಅಧಿಕಾರವನ್ನು ನೀಡಲಾಯಿತು. ಸರಕಾರ ಮಧ್ಯಪ್ರವೇಶ ಮಾಡುತ್ತಿರಲಿಲ್ಲ.

ಹೀಗೆ ಮೆಕ್ಸಿಕೊ ಸರಕಾರ ಗಡಿ ಕೈಗಾರಿಕೀಕರಣ ಕಾರ್ಯಕ್ರಮವು (BIP) ಅಂದಿನ ತನ್ನ ಬಿಕ್ಕಟ್ಟಿನ ಪರಿಸ್ಥಿತಿಗೆ ಒಂದು ತಾತ್ಕಾಲಿಕ ಪರಿಹಾರವೆಂದು ಭಾವಿಸಿತ್ತು. ಮೊದಲಿಗೆ ಈ ಕಾರ್ಯಕ್ರಮ ಗಡಿಪ್ರದೇಶದ 12.5 ಮೈಲಿಗಳನ್ನು ಆಕ್ರಮಿಸಿತ್ತು. 1972 ರಲ್ಲಿ ಇದು ಇಡೀ ದೇಶವನ್ನೇ ಆಕ್ರಮಿಸಿಕೊಂಡಿತು. ಇಡೀ ರಾಷ್ಟ್ರವೇ ಒಂದು ವಸಾಹತು ಪ್ರದೇಶವಾಗಿ ಬದಲಾಯಿತು. ಕಚ್ಚಾ ಸಾಮಗ್ರಿ ಮುಖ್ಯವಾಗಲಿಲ್ಲ ; ಶ್ರಮಶಕ್ತಿ ಪ್ರಮುಖ ಗುರಿಯಾಯಿತು. (ಮರಿಯ ಪೆಟ್ರಿಷಿಯಾ ಫರ್ನಾಂಡೆಜ್ ಕೆಲ್ಲಿ : 1981 : ಪು.5) [33]

## ಮಖಿಲ ಮಹಿಳೆಯರು

ಗಡಿ ಉದ್ಯಮೀಕರಣ ಕಾರ್ಯಕ್ರಮವು ಆರಂಭದಿಂದಲೂ ಒಂದು ಅಸಮತೋಲನದ ವ್ಯವಸ್ಥೆಯಾಗಿತ್ತು. ತಾನು ನೀಡಿದ ಹಲವು ವಿನಾಯಿತಿಗಳಿಗೆ ಪ್ರತಿಫಲವಾಗಿ ಮೆಕ್ಸಿಕೊ ಏನನ್ನೂ ಪಡೆದುಕೊಳ್ಳಲಿಲ್ಲ. ಗಡಿಪ್ರದೇಶದ ಪುರುಷ ಕಾರ್ಮಿಕರಲ್ಲಿ ನಿರುದ್ಯೋಗ ವ್ಯಾಪಕವಾಗಿತ್ತು. ಈ ಕಾರ್ಯಕ್ರಮದಿಂದ ಅದರ ನಿವಾರಣೆ ಆಗಬೇಕಿತ್ತು. ಆದರೆ ಇದು ಕಾರ್ಖಾನೆಗೆ ಅಗ್ಗದ ಕಾರ್ಮಿಕರನ್ನು ಒದಗಿಸುವುದನ್ನೇ ಗುರಿಯಾಗಿಟ್ಟು ಕೊಂಡಿತು. ಅದರಲ್ಲೂ ಹೆಚ್ಚಿನ ಪ್ರಮಾಣದಲ್ಲಿ ಮಹಿಳೆಯರನ್ನು ಆಕರ್ಷಿಸುವುದನ್ನೇ ಕಂಪನಿಗಳು ಗುರಿಯಾಗಿಟ್ಟುಕೊಂಡವು. ಆರ್ಥರ್ ಡಿ.ಲಿಟ್ಲ್ ಎಂಬ ಅಮೆರಿಕದ ಸಲಹಾ ಸಂಸ್ಥೆಯು ಗಡಿ ಪ್ರದೇಶ ಉದ್ಯಮೀಕರಣ ಕಾರ್ಯಕ್ರಮದ ಅಂಗವಾಗಿ ಹಲವು ಔದ್ಯಮಿಕ ಪ್ರದೇಶಗಳನ್ನು ನಿರ್ಮಿಸಿತ್ತು; ಅಮೆರಿಕದ ವ್ಯಾಪಾರ ಕಾರ್ಯಯೋಜನೆಯನ್ನು ರೂಪಿಸಿತ್ತು. ಇದು 1966ರಲ್ಲಿ ಅಧ್ಯಯನವೊಂದನ್ನು ನಡೆಸಿ, "ಈಗಿರುವ ಸುಮಾರು 25000 ಉದ್ಯಮಗಳಲ್ಲಿ ಮಹಿಳಾ ಶ್ರಮಶಕ್ತಿಯನ್ನು ಹೆಚ್ಚಾಗಿ ಬಳಸಿಕೊಳ್ಳುವ ಮೂಲಕ ಉತ್ಪಾದನೆಯನ್ನು ಹಲವು ಪಟ್ಟು ಹೆಚ್ಚಿಸಬಹುದು (ಈಗ ಮಹಿಳೆಯರು ಒಟ್ಟು ಶ್ರಮಶಕ್ತಿಯ ಐದನೆಯ ಒಂದು ಭಾಗ ಮಾತ್ರವಿದ್ದಾರೆ). ಅಲ್ಪಾದಾಯತರುವ ಕೃಷಿ ಮತ್ತು ವಾಣಿಜ್ಯಕ್ಕೆ ಸಂಬಂಧಪಟ್ಟ ಶ್ರಮವನ್ನು ಔದ್ಯೋಗಿಕ ಕೆಲಸಗಳಿಗೆ ಪರಿವರ್ತಿಸುವುದು ಮತ್ತು ಮಧ್ಯಮೆಕ್ಸಿಕೊದಿಂದ ಇನ್ನಷ್ಟು ಹೆಚ್ಚು ಪ್ರಮಾಣದಲ್ಲಿ ಜನ ವಲಸೆ ಬರುವಂತೆ ಮಾಡುವ ಅದು ಸಾಧ್ಯ (ನಾರ್ತ್ ಅಮೆರಿಕನ್ ಕಾಂಗ್ರೆಸ್ ಆನ್ ಲ್ಯಾಟಿನ ಅಮೆರಿಕ (NACLA) : 1975 : ಪು. 11)" ಎಂದು ಹೇಳಿತ್ತು.

1974ರ ಹೊತ್ತಿಗೆ ಮೆಕ್ಸಿಕೊ ಗಡಿಪ್ರದೇಶದಲ್ಲಿ ಸುಮಾರು 500 ಮಖಿಲಡೊರಗಳಾಗಿದ್ದವು. ಅವೆಲ್ಲವೂ ಉತ್ಪಾದನೆಯಲ್ಲಿ ತೊಡಗಿದ್ದವು. ಅವುಗಳಲ್ಲಿ ಸುಮಾರು 80,000 ಶ್ರಮಿಕರು ನೇಮಕಗೊಂಡಿದ್ದರು. ಅವರಲ್ಲಿ ಶೇಕಡ 85 ಮಂದಿ ಮಹಿಳೆಯರಾಗಿದ್ದರು. ಅವರಲ್ಲಿ ಹೆಚ್ಚಿನವರು 16-25 ವಯೋ ಗುಂಪಿಗೆ ಸೇರಿದವರಾಗಿದ್ದರು; ನಗರಗಳು ಮತ್ತು ಚಿಕ್ಕ ಊರುಗಳಿಂದ ಬಂದವರಾಗಿದ್ದರು. ತಮ್ಮ ಹೆಣ್ಣುಮಕ್ಕಳಿಗೆ ಉದ್ಯೋಗ ದೊರಕುತ್ತದೆಂಬ ಭರವಸೆಯಿಂದ ಇಡೀ ಕುಟುಂಬಗಳೇ ಉತ್ತರದ ಕಡೆಗೆ ಹೊರಟಿದ್ದವು. ಈ ಮಹಿಳೆಯರನ್ನು ಜೋಡಣೆಯ ಉದ್ಯೋಗಗಳಿಗೆ ಆಯ್ಕೆ ಮಾಡಲು ಕಾರಣಗಳೆಂದರೆ,

- ಇವರು ಸಾಮಾಜಿಕವಾಗಿ ಉತ್ತಮ ಸ್ಥಿತಿಯಲ್ಲಿ ಇಲ್ಲ
- ಇವರಿಗೆ ಪುರುಷರಿಗಿಂತ ಕಡಿಮೆ ವೇತನ ಕೊಡಬಹುದು
- ಇವರ ಸಂಪಾದನೆಯನ್ನು ಕುಟುಂಬದ ಪುರುಷ ಮೂಲದ ಆದಾಯಕ್ಕೆ ಉಪ ಆದಾಯವೆಂದು ಮಾತ್ರ ಪರಿಭಾವಿಸಲಾಗುವುದು.

### ಕೊಮೊ : ಮೆಕ್ಸಿಕೊ ಮಹಿಳೆಗಾಗಿ ಸ್ವಸಹಾಯ ಸಂಸ್ಥೆ

ಬಹುರಾಷ್ಟ್ರೀಯರ ಪ್ರಾಬಲ್ಯಕ್ಕೆ ಸವಾಲೆಸೆಯಲು ಸ್ಥಳೀಯವಾದ ತೃಣಮೂಲ ಯೋಜನೆಗಳು ಅತ್ಯಗತ್ಯ. ಅಂಥ ಒಂದು ಯೋಜನೆಯೇ ಸಿಯುದಾದ್ ಜುವಾರೆಜ್‌ನ ದುಡಿಯುವ ಮಹಿಳೆಯರ ತರಬೇತಿ ಕೇಂದ್ರ (centre for the orientation of the working woman como) ಕೊಮೊ. ಈ ಕೇಂದ್ರವು 1970ರಿಂದಲೂ ದುಡಿವ ಮಹಿಳೆಯರ, ಅದರಲ್ಲೂ ಮಖಿಲಡೊರ ಕಾರ್ಮಿಕರರಾಗಿದ್ದವರ ಅಗತ್ಯಗಳನ್ನು ಪೂರೈಸುತ್ತಾ ಬಂದಿದೆ.

ಕೊಮೊ ಮಹಿಳೆಯರಲ್ಲಿ ಜಾಗೃತಿಯನ್ನುಂಟು ಮಾಡುತ್ತದೆ; ಶಿಕ್ಷಣ ನೀಡುತ್ತದೆ. ಇದರಿಂದಾಗಿ ಮಹಿಳೆಯರು ತಮ್ಮ ಗಡಿಜೀವನದ ಏರುಪೇರುಗಳೊಂದಿಗೆ ಬದುಕಲು ಕಲಿಯುತ್ತಾರೆ. ತಮ್ಮ ಅನುಭವಗಳಿಂದ ತಮಗೆ ತಾವೇ ನೆರವಾಗುತ್ತಾರೆ ; ತಮ್ಮ ಬದುಕಿನ ಮೇಲಿನ ನಿಯಂತ್ರಣವನ್ನು ಹೊಂದಲು ಶಕ್ತರಾಗುತ್ತಾರೆ. ಅವರಿಗೆ ಸಮಾಜ ಕಾರ್ಯಕರ್ತರ ತರಬೇತಿ ನೀಡಲಾಗುತ್ತದೆ; ಸಹಕಾರಿ ಉದ್ಯಮಗಳನ್ನು ಸ್ಥಾಪಿಸಲು ನೆರವು ದೊರೆಯುತ್ತದೆ. ಲೆಕ್ಕಪತ್ರಗಳ ದಾಖಲೆ ಮತ್ತು ನಿರ್ವಹಣೆಗಳ ಕೌಶಲವನ್ನು ನೀಡುತ್ತಾರೆ. ಉದಾಹರಣೆಗೆ, ಮಖಿಲಡೊರದಿಂದ ಹೊರಹಾಕಿಸಿಕೊಂಡ ಹತ್ತು ಮಂದಿ ಮಹಿಳೆಯರು ಒಂದು ಉಡುಪು ತಯಾರಿಕಾ ಸಹಕಾರ ಸಂಘವನ್ನು ರಚಿಸಿಕೊಂಡರು. ಸಮಾಜಕಾರ್ಯಕರ್ತೆ, ಅಧ್ಯಾಪಕಿ, ದಾದಿ, ಸಹಕಾರಿ ತಂತ್ರಜ್ಞೆ ಮತ್ತು ಸಿಬ್ಬಂದಿ ನಿರ್ವಹಣಾ ಸಹಾಯಕಿ ಮುಂತಾದ ವೃತ್ತಿಪರ ತರಬೇತಿಯನ್ನು ಕೊಮೊ ಮಹಿಳೆಯರಿಗೆ ನೀಡುತ್ತದೆ.

ಕೊಮೊದ ಸಂರಚನೆ ಮತ್ತು ಚಟುವಟಿಕೆಗಳು ಕಾಲದಿಂದ ಕಾಲಕ್ಕೆ ಬದಲಾವಣೆಗಳಿಗೊಳಗಾಗಿವೆ. ಇದು ಮಹಿಳೆಯರು ಸತತವಾಗಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡುದರ ದ್ಯೋತಕವಾಗಿದೆ. ಕೊಮೊ ಮೆಕ್ಸಿಕೊದ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿಗಳನ್ನು ಕುರಿತ ತಿಳಿವಳಿಕೆಯನ್ನು ನೀಡುತ್ತದೆ ; ಕಾರ್ಖಾನೆ ಉದ್ಯೋಗಕ್ಕೆ ಪರ್ಯಾಯಗಳನ್ನು ತೋರಿಸಿ ಕೊಡುತ್ತದೆ ; ಇದೊಂದು ಮಾದರಿ ಸಂಸ್ಥೆಯಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಲ್ಪಟ್ಟಿದೆ.

ಮಖಿಲಡೊರ ಕಾರ್ಮಿಕರು ವಾರದಲ್ಲಿ 48 ಗಂಟೆಗಳ ಕಾಲ ದುಡಿಯುತ್ತಿದ್ದರು; ಗಂಟೆಗೆ 35 ರೂಪಾಯಿಗಳಂತೆ ಕೂಲಿಯನ್ನು ಪಡೆಯುತ್ತಿದ್ದರು (ದಿನಕ್ಕೆ 455 ಪೆಸೊಗಳು ; ಇತ್ತೀಚೆಗೆ ಮೆಕ್ಸಿಕೊದ ಪೆಸೊ ಅಪಮೌಲ್ಯಗೊಂಡಿದೆ ; ಇದರಿಂದಾಗಿ ಕಾರ್ಮಿಕರ ವೇತನ ಮತ್ತಷ್ಟು ಕಡಿಮೆಯಾಗಿದೆ)

ಬಹುರಾಷ್ಟ್ರೀಯ ಕಂಪನಿಗಳು ಮಹಿಳೆಯರಿಗೆ ಆದ್ಯತೆ ನೀಡಲು ಕಡಿಮೆ ಕೂಲಿ ಮಾತ್ರವೇ ಕಾರಣವಲ್ಲ. ಇಲ್ಲಿಗೆ ಬರುವ ಹುಡುಗಿಯರು ಮೆದು ಸ್ವಭಾವದ, ದೂರು ಹೇಳದ, ಸಾಂಸ್ಕೃತಿಕ ಮತ್ತು ಸಾಮಾಜಿಕ ಮಾದರಿ ಪಡಿಯಚ್ಚುಗಳಾಗಿರುತ್ತಾರೆ. ಆರಂಭದಿಂದಲೂ ಕಟ್ಟುಪಾಡುಗಳಲ್ಲಿ ಬೆಳೆದಿರುತ್ತಾರೆ. ಅಧಿಕಾರಿ ವರ್ಗದವರಿಗೆ - ಅದರಲ್ಲೂ ವಿಶೇಷವಾಗಿ ಪುರುಷರಿಗೆ - ಗೌರವ ವಿನಯವನ್ನು ತೋರಿಸುತ್ತಾರೆ; ಆದೇಶಗಳನ್ನು ಪಾಲಿಸುತ್ತಾರೆ ; ಬದಲಾವಣೆಗಳನ್ನು ಒಪ್ಪಿಕೊಳ್ಳುತ್ತಾರೆ ; ಸುಲಭವಾಗಿ ಹೊಂದಿಕೊಳ್ಳುತ್ತಾರೆ ; ಬೇಡಿಕೆಗಳು ಕಡಿಮೆಯಿರುತ್ತವೆ ಎಂದು ಮಖಿಲಡೊರಗೆ ಸಂಬಂಧಿಸಿದ ಪತ್ರವೊಂದು ಹೇಳುತ್ತದೆ. ಸಿಯುದಾದ್ ಜುವಾರೆಜ್‌ನ ಇಲೆಕ್ಟ್ರಾನಿಕ್ ಉದ್ಯಮದ ನಿರ್ವಾಹಕರೊಬ್ಬರು ಹೀಗೆ ಹೇಳುತ್ತಾರೆ: "ಮೆಕ್ಸಿಕೊ ಪುರುಷ ಇನ್ನೂ ಪುರುಷನೇ ಆಗಿದ್ದಾನೆ. ಇಂಥ ಉದ್ಯೋಗ ಅವನ ಪುರುಷಕಲ್ಪನೆಗೆ ತಕ್ಕದಲ್ಲ. ಇದು ಬೇರೊಂದು ಸಂಸ್ಕೃತಿಯ ಚಮತ್ಕಾರ ಮಾತ್ರ. ಇದರ ಬದಲು ಅವರು ಒಂದು ಕಾರ್ಖಾನೆಯನ್ನೇ ನಡೆಸುತ್ತಾರೆ (ಕ್ಲೀವ್‌ಲ್ಯಾಂಡ್ ಪ್ಲೇನ್ ಡೀಲರ್ : 1981).

ಇಂದು ಮೆಕ್ಸಿಕೊ ಗಡಿಪ್ರದೇಶದಲ್ಲಿ ಸುಮಾರು ಆರುನೂರಕ್ಕೂ ಹೆಚ್ಚು ಮಖಿಲಡೊರಗಳಿವೆ. ಹೊರದೇಶಗಳ ಉತ್ಪಾದನೆಯನ್ನು ಪೋಷಿಸಲೆಂದೇ ರೂಪಿತವಾದ ವಿನಾಯತಿ ತೆರಿಗೆ ನಿಯಮಗಳು ಜಾರಿಯಲ್ಲಿವೆ. ಇವುಗಳ ಅನುಸಾರವಾಗಿ ಅಮೆರಿಕವನ್ನು ಪ್ರವೇಶಿಸುವ ಒಟ್ಟು ಜೋಡಣಾ ಉತ್ಪಾದನೆಗಳ ಅರ್ಧದಷ್ಟು ಇಲ್ಲಿಯದೇ ಆಗಿವೆ. ಎಣ್ಣೆ ರಫ್ತಿನಿಂದ ಬರುವ ಸಂಪಾದನೆ ಇಳಿಮುಖವಾಗಿದೆ. ಇದರಿಂದ ಮೆಕ್ಸಿಕೊದ ಆರ್ಥಿಕ ಸಮಸ್ಯೆಗಳು ಹೆಚ್ಚುತ್ತಿವೆ. ಈ ಪರಿಸ್ಥಿತಿಯ ಲಾಭವನ್ನು ಪಡೆಯಲು ಕಂಪನಿಗಳು ಗಡಿಪ್ರದೇಶಗಳಿಗೆ ಸಾಲುಗಟ್ಟಿ ಬರುತ್ತಿವೆ. ಈ ಹಿನ್ನೆಲೆಯಲ್ಲಿ ಮಖಿಲಡೊರಗಳ ಭವಿಷ್ಯ ರಂಗುರಂಗಾಗಿರುವಂತಿದೆ.

ಏನೇ ಆದರೂ ಮಖಿಲಡೊರಗಳಲ್ಲಿ ದುಡಿಯುತ್ತಿರುವ ಸುಮಾರು 1,35,000 ಮಹಿಳೆಯರಿಗೆ ಅಥವಾ ಇನ್ನು ಮುಂದೆ ದುಡಿಮೆಯ ಕ್ಷೇತ್ರಕ್ಕೆ ಕಾಲಿಡಲಿರುವ ಸಾವಿರಾರು ಮಂದಿಗೆ ಇಲ್ಲಿ ಯಾವುದೇ ರಂಗಿರುವುದಿಲ್ಲ. ಕಂಪನಿಗಳು ಕನಿಷ್ಠ ವೇತನ ಮತ್ತು ಸಾಮಾಜಿಕ ರಕ್ಷಣೆಗಳಂಥ ಕಾರ್ಮಿಕ ಕಾನೂನುಗಳನ್ನು ಸಾಮಾನ್ಯವಾಗಿ ಉಲ್ಲಂಘಿಸುತ್ತವೆ. ತಮ್ಮ ಸೇವಾಹಿರಿಮೆ ಮತ್ತದರೊಂದಿಗೆ ವೇತನದ ಹೆಚ್ಚಳ ಮುಂತಾದವನ್ನು ಕೇಳದಂತೆ ಮಾಡಲು ತಾತ್ಕಾಲಿಕ ಉದ್ಯೋಗ ಒಪ್ಪಂದಕ್ಕೆ ಸಹಿಮಾಡಲು ಮಹಿಳೆಯರನ್ನು ಒತ್ತಾಯಿಸುತ್ತವೆ. ಉದ್ಯೋಗಾರ್ಥಿಯು ಗರ್ಭಿಣಿಯಲ್ಲ ಎನ್ನುವುದಕ್ಕೆ ವೈದ್ಯರಿಂದ ಶಿಫಾರಸ್ಸು ಪತ್ರದ ಆವಶ್ಯಕತೆ ಪದೇ ಪದೇ ಉಂಟಾಗುತ್ತದೆ. ಹೀಗೆ ಹೆರಿಗೆ ಸೌಲಭ್ಯಗಳಿಗಾಗಿ ಮಾಡಬೇಕಾದ ಯಾವುದೇ ಖರ್ಚುವೆಚ್ಚಗಳನ್ನು ದೂರಮಾಡಿಕೊಳ್ಳುತ್ತವೆ.

ಮಖಿಲಡೊರಗಳಲ್ಲಿ ಶೇಕಡ ಅರವತ್ತರಷ್ಟು ಇಲೆಕ್ಟ್ರಾನಿಕ್ಸ್ ಕೈಗಾರಿಕಾ ಘಟಕಗಳಿವೆ. ಅವುಗಳ ಕಾರ್ಮಿಕರು ವಿಷಯುಕ್ತ ರಾಸಾಯನಿಕ ವಸ್ತುಗಳೊಂದಿಗೆ ದುಡಿಯುತ್ತಾರೆ. ತಮ್ಮ ದುಡಿಮೆಯನ್ನು ಮನೆಕೆಲಸಗಳಿಂದ ತಾತ್ಕಾಲಿಕ ಬದಲಾವಣೆ ಎಂದು ಭಾವಿಸುತ್ತಾರೆ. ಆದ್ದರಿಂದ ಕಂಪನಿಗಳು ಅವರ ಆರೋಗ್ಯ ಮತ್ತು ರಕ್ಷಣೆಯ ಬಗ್ಗೆ ಕಾಳಜಿ ವಹಿಸುವುದಿಲ್ಲ. "ನಾವು ಇದರ ಬಗ್ಗೆ ಹೆಚ್ಚು ತಲೆಕೆಡಿಸಿ ಕೊಳ್ಳುವುದಿಲ್ಲ. ಈ ಹುಡುಗಿಯರು ತಮ್ಮ ಆರೋಗ್ಯ ಕೆಡುವಷ್ಟು ದೀರ್ಘಕಾಲ ಮುಂದುವರಿಯುವುದಿಲ್ಲ" ಎಂದು ಸಿಯುದಾದ್ ಜುವಾರೆಜ್‌ನ ಕಾರ್ಖಾನೆಯ ನಿರ್ವಹಣಾಧಿಕಾರಿ ಹೇಳುತ್ತಾರೆ (ಮರಿಯಾ ಪೆಟ್ರಿಷಿಯಾ ಫರ್ನಾಂಡಿಸ್ ಕೆಲ್ಲಿ).

ಗಡಿ ಪ್ರದೇಶದ ಉದ್ಯಮಗಳಲ್ಲಿ ಉಡುಪು ಕಾರ್ಖಾನೆಗಳು ಶೇಕಡ 30 ರಷ್ಟಿವೆ. ಇಲ್ಲಿಯ ಕಾರ್ಮಿಕರಲ್ಲಿ ತೀವ್ರ ಬೆನ್ನುನೋವು ಅಸ್ತಮಾ, ಕಣ್ಣುರೆಪ್ಪೆಗಳ ಊತ (conjuctivitis), ಶ್ವಾಸಕೋಶದ ಖಾಯಿಲೆ ಮುಂತಾದ ವೃತ್ತಿ ಸಂಬಂಧವಾದ ರೋಗಗಳು ಸರ್ವೇಸಾಮಾನ್ಯವಾಗಿದೆ. ಜೋಡಣೆ ಕೆಲಸದ ಒತ್ತಡ ಹೆಚ್ಚಾದಂತೆ ಕರುಳು ಸಂಬಂಧೀ ಖಾಯಿಲೆಗಳು, ನಿದ್ರೆಯಿಲ್ಲದಿರುವುದು ಮತ್ತು ನಿಯಮಿತ -ವಾಗಿರದ ಮುಟ್ಟು ಮುಂತಾದ ತೊಂದರೆಗಳಿಂದ ಮಹಿಳಾಕಾರ್ಮಿಕರು ನರಳುತ್ತಾರೆ. ಮೂತ್ರಕೋಶದ ಸಮಸ್ಯೆಗಳು ಕೂಡ ಅವರಲ್ಲಿ ಬಹಳ ಸಾಮಾನ್ಯ, ಏಕೆಂದರೆ, ಅವರಿಗೆ ಶೌಚಾಲಯಗಳ ಬಳಕೆ ಅಥವಾ ನೀರನ್ನು ಯಥೇಚ್ಛವಾಗಿ ಕುಡಿಯುವ ಸ್ವಾತಂತ್ರ್ಯಗಳೆರಡೂ ಇರುವುದಿಲ್ಲ.

ಮೊಟ್ಟಮೊದಲ ಮಖಿಲಡೊರ ಆರಂಭಗೊಂಡು ಎರಡು ದಶಕಗಳೇ ಕಳೆದಿವೆ. ಗಡಿ ಉದ್ಯಮೀಕರಣ ಕಾರ್ಯಕ್ರಮ (BIP)ವು ಸರಕಾರದ ಆರಂಭಿಕ ನಿರೀಕ್ಷೆಗಳ ದೃಷ್ಟಿಯಿಂದ ಒಂದು ಸೋಲೆಂದೆ ಹೇಳಬಹುದು. ಗಡಿಪ್ರದೇಶದಲ್ಲಿ ಪುರುಷರ ನಿರುದ್ಯೋಗದ ಪ್ರಮಾಣ ಶೇಕಡ 67ರಷ್ಟಿದೆ. ಮೆಕ್ಸಿಕೊ ಉದ್ಯಮಕ್ಕೆ ತಾಂತ್ರಿಕತೆ ಮತ್ತು ಶ್ರಮಶಕ್ತಿಗೆ ಕೌಶಲಗಳ ವರ್ಗಾವಣೆಗಳು ಅತ್ಯಂತ ಕಡಿಮೆ ಎನ್ನಬಹುದು. ಬಂಡವಾಳ ಕೇಂದ್ರಿತ ತಾಂತ್ರಿಕತೆ ಮಾತ್ರ ಅಮೆರಿಕದಲ್ಲೇ ಉಳಿದಿದೆ.... ಮಖಿಲಡೊರ ಶ್ರಮಿಕರ ವೇತನದ ಶೇಕಡ 70 ಭಾಗ ಗಡಿಯಾಚೆ ಅಮೆರಿಕದಲ್ಲಿ ಖರ್ಚುಮಾಡಲಾಗುತ್ತದೆ. ಮೆಕ್ಸಿಕೋ

ಆರ್ಥಿಕತೆಗೆ ಯಾವುದೇ ಕೊಡುಗೆಯನ್ನು ನೀಡುವುದಿಲ್ಲ (ವೂಗ). ಈ ದೇಶದ ಆರ್ಥಿಕ ಬಿಕ್ಕಟ್ಟಿಗೆ ತಾತ್ಕಾಲಿಕ ಪರಿಹಾರವಾಗಿ ಯಾವುದು ಆರಂಭವಾಯಿತೋ, ಅದೀಗ ಅಮೆರಿಕದ ಮೇಲಿನ ಅವಲಂಬನೆಯನ್ನು ಮತ್ತಷ್ಟು ಆಳವಾಗಿ ಬೇರೂರಿಸಿದೆ. ಅಷ್ಟೇ ಅಲ್ಲ. ಮೆಕ್ಸಿಕೊ ಜನತೆಗೆ ಹೊಸ ಸಮಸ್ಯೆಗಳನ್ನು ಹುಟ್ಟುಹಾಕಿದೆ.

ಮಹಿಳೆಯರಿಗೆ ಅಡಿಗೆಮನೆ ಮತ್ತು ಮಲಗುವ ಕೋಣೆಗಳು ಸೂಕ್ತ ಸ್ಥಳವೆಂದು ಸಮಾಜ ಭಾವಿಸುತ್ತದೆ. ಇಂಥ ಸಮಾಜದಲ್ಲಿ ಮಖಿಲಡೊರಗಳಲ್ಲಿ ದುಡಿಯುವ ಮಹಿಳೆಯರ ಪರಿಸ್ಥಿತಿ ವಿರೂಪಗೊಂಡಿದೆ. ಪುರುಷರಲ್ಲಿ ಕೆಳ ಮಟ್ಟದ ಉದ್ಯೋಗ ಮತ್ತು ನಿರುದ್ಯೋಗಗಳಿವೆ. ಇವುಗಳ ಪರಿಣಾಮವಾಗಿ, ಮಹಿಳೆಯರು ಹೆಚ್ಚಿನ ಸಂದರ್ಭಗಳಲ್ಲಿ ತಮ್ಮ ಕುಟುಂಬಗಳ ಪ್ರಮುಖ ಆದಾಯ ಮೂಲವಾಗಿದ್ದಾರೆ. ಮಹಿಳಾ ಶ್ರಮಶಕ್ತಿ ಶೇಕಡ 20 ರಿಂದ 30 ರಷ್ಟು ಹೆಚ್ಚುತ್ತದೆ. ಈ ಮಹಿಳೆಯರು ತಮ್ಮ ಕುಟುಂಬದ ಯಜಮಾನಿಯರಾಗಿದ್ದಾರೆ. ಈ ಪ್ರವೃತ್ತಿಯನ್ನು ವಿಶೇಷವಾಗಿ ಉಡುಪು ಕಾರ್ಮಿಕರಲ್ಲಿ ಕಾಣಬಹುದು. ಇವರು ಜೋಡಣಾ ಕಾರ್ಮಿಕರಿಗಿಂತ ವಯಸ್ಸಿನಲ್ಲಿ ಹಿರಿಯರಾಗಿರುತ್ತಾರೆ. ಇವರಿಗೆ ಮಕ್ಕಳಿರುತ್ತಾರೆ. (ಕೆಲ್ಲಿ).

ಕಾರ್ಖಾನೆ ದುಡಿಮೆ "ನಮಗೆ ಯಾವುದೇ ಆಯ್ಕೆಯನ್ನು ನೀಡಿಲ್ಲ; ನಿಜವಾದ ಉದ್ಯೋಗಾವಕಾಶವನ್ನು ನೀಡಿಲ್ಲ" ಎಂದು ಮಖಿಲಡೊರದಲ್ಲಿ ಹತ್ತು ವರ್ಷಗಳಿಂದ ದುಡಿಯುತ್ತಿರುವ ಮರಿಯ ಐಸೆಲ ಟೊರಸ್ ನಂಬುತ್ತಾಳೆ (ಯೂನೊ ಮಾಸ್ ಯುನೊ : 1982). ಕಾರ್ಖಾನೆ ಕೆಲಸ ಮಹಿಳೆಯರಿಗೆ ಗಳಿಕೆಯ ಶಕ್ತಿ ಮತ್ತು ಸ್ವಾತಂತ್ರ್ಯಗಳನ್ನು ಕೊಡುತ್ತದೆ; ಆ ಮೂಲಕ ಅವರಿಗೆ ವಿಮೋಚನೆಯನ್ನು ನೀಡುತ್ತದೆಂದು ಮೆಕ್ಸಿಕೊ ಸರಕಾರ ಮತ್ತು ಬಹುರಾಷ್ಟ್ರೀಯರು ಹೇಳಿಕೊಳ್ಳುತ್ತಾರೆ.

ಗಡಿರಾಜ್ಯವಾದ ಚಿಹುವಾಹುವಿನಲ್ಲಿ ವಿದೇಶೀ ಮಾಲೀಕತ್ವದ ಅನೇಕ ಕಾರ್ಖಾನೆಗಳಿವೆ. ಇಲ್ಲಿಯ ರಾಜ್ಯಪಾಲರು, "ಮಖಿಲಡೊರಗಳು ಬೇರೆ ಎಲ್ಲಕ್ಕಿಂತ ಮಹಿಳಾ ವಿಮೋಚನೆಯ ಪರವಾಗಿ ಕೆಲಸಮಾಡುವಂತಾಗಿವೆ "ಎಂದು ಘೋಷಿಸುತ್ತಾರೆ (ವೂಗ್).

ಸಿಯುದಾದ್ ಜುವಾರೆಜ್‌ನಲ್ಲಿ ಮಖಿಲಡೊರಗಳ ಸಂಖ್ಯೆ ನೂರಕ್ಕೂ ಹೆಚ್ಚಾಗಿದೆ. ಇಲ್ಲಿನ ಬ್ಯಾಂಕುಗಳು, ಬಾರುಗಳು ಬಟ್ಟೆ ಅಂಗಡಿಗಳು ಮತ್ತು ಡಿಸ್ಕೊ ಕೇಂದ್ರಗಳು ಮಖಿಲಡೊರ ಮಹಿಳೆಯರಿಗೆ ತಮ್ಮ ಸೇವೆ ಸಲ್ಲಿಸುತ್ತಿವೆ!

ಕೊಳ್ಳುವ ಶಕ್ತಿಯೇ ಸಾಮಾಜಿಕ ಶಕ್ತಿಯಲ್ಲ. ಈ ಸಮಾಜದಲ್ಲಿ ಮಖಿಲ ಮಹಿಳೆಯರ ವಿರುದ್ಧದ ಅಲೆ ದಿನೇ ದಿನೇ ಹೆಚ್ಚುತ್ತಿದೆ. ಕುಟುಂಬ ಮತ್ತು ಸಮಾಜದ ಮೇಲಿರುವ ತಮ್ಮ ಅಧಿಪತ್ಯವನ್ನು ಉಳಿಸಿಕೊಳ್ಳಬಯಸುವ ಪುರುಷರಿಗೆ ದುಡಿಯುವ ಮಹಿಳೆಯರ ಬಗ್ಗೆ ಅಸಹನೆ ಮತ್ತು ದ್ವೇಷಗಳಿವೆ. ಆದರಿಂದಲೇ ಅವರು ಮಖಿಲ ಮಹಿಳೆಯರ ಮೇಲೆ ಕಳಂಕವನ್ನು ಹೊರಿಸುತ್ತಾರೆ. ಅವರನ್ನು ನೈತಿಕತೆ ಇಲ್ಲದವರು ಎನ್ನುತ್ತಾರೆ.

ಕುಟುಂಬವನ್ನು ನಾಶಮಾಡುವವರು ಎಂದು ಭಾವಿಸುತ್ತಾರೆ. ಹೀಗೆ ಕಾರ್ಖಾನೆಯ ಉದ್ಯೋಗದೊಂದಿಗೆ ಅಪಕೀರ್ತಿಯೂ ಅಂಟಿಕೊಳ್ಳುತ್ತದೆ. ಉತ್ತರ ಮೆಕ್ಸಿಕೊದಲ್ಲಿ ವಿವಾದಾತ್ಮಕ ಅಂಶಗಳನ್ನು ಕುರಿತ ನಾಟಕ ಪ್ರದರ್ಶನಗಳು ನಡೆಯುತ್ತವೆ. ಅವು ವಿವೇಚನೆಯಿಲ್ಲದ ಲೈಂಗಿಕತೆ, ಲೈಂಗಿಕ ರೋಗಗಳ ಪ್ರಸಾರ, ಕಾರ್ಖಾನೆಯ ವಿರಾಮದ ಕೊಠಡಿಗಳಲ್ಲಿ ಕಂಡುಬರುವ ಭ್ರೂಣಗಳು ಮುಂತಾದ ವಿಷಯಗಳನ್ನು ಕುರಿತಾಗಿರುತ್ತವೆ." "ಇದರ ಬಗ್ಗೆ ನನಗೆ ಚಿಂತೆಯಾಗಿದೆ. ನಿಮಗೆ ಮಖಿಲ ಡೊರದಲ್ಲಿ ಉದ್ಯೋಗವಿದೆಯೆಂದು ತಿಳಿದ ಕೂಡಲೆ ಅವರು ನಿಮ್ಮನ್ನು ಬೇರೆಯದೇ ರೀತಿಯಲ್ಲಿ ಕಾಣುತ್ತಾರೆ. ನೀವಲ್ಲಿ ಉದ್ಯೋಗದಲ್ಲಿದ್ದೀರೆಂದರೆ ನಿಮಗೆ ವೇಶ್ಯೆಯಾಗುವ ಸಾಧ್ಯತೆ ಇದೆಯೆಂದು ಅವರು ಯೋಚಿಸಬಹುದು" ಎಂದು ಮಹಿಳೆಯೊಬ್ಬಳು ಹೇಳಿದಳೆಂದು ಮಾನವಶಾಸ್ತ್ರಜ್ಞೆಯಾದ ಪೆಟ್ರಿಷಿಯಾ ಫರ್ನಾಂಡಿಸ್ ಕೆಲ್ಲಿ ಹೇಳುತ್ತಾರೆ. "ಕ್ಯಾಥೊಲಿಕ್ ಸಮಾಜದಲ್ಲಿ ಹೆಣ್ಣುಮಕ್ಕಳ ಸಾಮಾಜೀಕರಣದ ಅನುಭವದ ಬಗ್ಗೆ ನೀವು ಯೋಚಿಸಿ. 'ಅಪಕೀರ್ತಿ'ಗೊಳಗಾಗುವ ಭಯವೇ ಎಷ್ಟೋ ಮಹಿಳೆಯರನ್ನು ಗೌರವಯುತವಾಗಿ ಸಭ್ಯರಂತೆ ವರ್ತಿಸಲು ಪ್ರೇರೇಪಿಸುತ್ತದೆ; ಆಡಳಿತ ವ್ಯವಸ್ಥೆ ಕೂಡ ಇದನ್ನೇ ಬಯಸುತ್ತದೆ" ಎಂದು ಕೆಲ್ಲಿ ನಂಬುತ್ತಾರೆ.

ಕನ್ನಡಕ್ಕೆ : ವೇಂ.ವನಜ.

(ಮೂಲ : ಆ್ಯನೆಟ್ ಪ್ಯೂಯೆಂಟಿ ಮತ್ತು ಬಾರ್ಬರಾ ಎರಿನ್‌ರೀಕ್ ರವರ 'ವಿಮೆನ್ ಇನ್ ಗ್ಲೋಬಲ್ ಫ್ಯಾಕ್ಟರಿ')

---

ನಾ ಕೊಂದ ಹುಡುಗಿ ಕತೆಯು ಎಷ್ಟೇ ಕಲಾತ್ಮಕವಾಗಿದ್ದರೂ, ಅವರು ಅದನ್ನೊಂದು ಅದ್ಭುತ ಕಥನವಾಗಿ ಚಿತ್ರಿಸಿದ್ದರೂ ಕೂಡಾ ಅಂತಿಮವಾಗಿ ಆ ಕತೆಯ ದರ್ಶನ ಹೆಣ್ಣಿನ ವಿರೋಧಿಯಾದ ನಿಲುವನ್ನೇ ಎಂಬ ಅನುಮಾನ ಕಾಡುತ್ತದೆ. ನಾಕೊಂದ ಹುಡಗಿಯನ್ನು ಕೇವಲ ಆ ಕತೆಯ ನಿರೂಪಕ ಕೊಲ್ಲುವುದಾದರೆ. ಪ್ರತಿಬಾರಿ ಓದುಗನೂ ಕೊಲ್ಲುತ್ತಾ ಸಾಗುವನೇನೋ ಎಂಬ ಭಾವನೆ ಬರುತ್ತದೆ. ನಾಕೊಂದ ಹುಡಿಗಿ ಕತೆಯು ವಿಚಿತ್ರವಾದ ಅನ್ಯಾಯವನ್ನು ನ್ಯಾಯದ ಬೆಲೆಯಲ್ಲಿ ಮಾರಿಬಿಡುತ್ತದೆ.

ಮೊಗಳ್ಳಿ ಗಣೇಶ್.
'ಅಗ್ನಿ' ಜುಲೈ - 25
ತಕರಾರು ಅಂಕಣ

# ' ಕನಿಷ್ಠ ವೇತನ ನಮ್ಮ ಹಕ್ಕು '

**1800 ರೂ ವೇತನ ನಮ್ಮ ಹಕ್ಕು, ಕನಿಷ್ಠ ವೇತನ 1800 ರೂ ಕೊಡಲೇ ಬೇಕು ಎಂಬ ಘೋಷಣೆಗಳನ್ನು ಬೆಂಗಳೂರು ಮಹಾನಗರ ಪಾಲಿಕೆ ಗುತ್ತಿಗೆ ವ್ಯವಸ್ಥೆಯಡಿ ಕೆಲಸ ಮಾಡುತ್ತಿರುವ ಪೌರಕಾರ್ಮಿಕರು. ದಿನಾಂಕ 23 ಜುಲೈ 2003 ರಂದು ಬುಧವಾರ ಮಧ್ಯಾಹ್ನ 1:30 ಗೆ ಕಾರ್ಪೊರೇಷನ್ ಮುಖ್ಯ ಕಛೇರಿ ಎದುರಿನಿಂದ ಮುಖ್ಯ ಮಂತ್ರಿಗಳ ಗೃಹದವರೆಗೂ ಬೃಹತ್ ಮೆರವಣಿಗೆಯನ್ನು ಹಮ್ಮಿಕೊಂಡಿದ್ದರು.**

ನಗರದ ಸ್ವಚ್ಛತೆಯಂತಹ ಕಠಿಣ ಕೆಲಸದಲ್ಲಿ ತೊಡಗಿರುವ ಪೌರಕಾರ್ಮಿಕರು ಎಲ್ಲರ ಗಮನಕ್ಕೆ ಬಂದಿದ್ದಾರೆ, ಈ ಕಾರ್ಮಿಕರಲ್ಲಿ ಶೇ 80 ಕ್ಕಿಂತ ಹೆಚ್ಚಿನವರು ದಲಿತರು, ಮಹಿಳೆಯರು ಹಾಗೂ ಅನಕ್ಷರಸ್ಥರು. ಅಮಾನವೀಯ ಕೆಲಸದ ಪರಿಸ್ಥಿತಿಯಲ್ಲಿ ದುಡಿಯುವ ಇವರಿಗೆ ಸಿಗುತ್ತಿರುವ ಸಂಬಳ ಕೇವಲ ರೂ 900 /- ರಿಂದ ರೂ 1000 ಮಾತ್ರ. ಕಳೆದ 10ವರ್ಷಗಳಿಂದಲೂ ಗುತ್ತಿಗೆ ಕಾರ್ಮಿಕ ಕಾಯ್ದೆಯಲ್ಲಿನ ಹಕ್ಕುಗಳಿಗಾಗಿ ಅವರದೇ ಸಂಘ ಮಾಡಿಕೊಂಡು ಹೋರಾಡುತ್ತಾ ಬಂದಿದ್ದಾರೆ.

ಇವರ ಹೋರಾಟದ ಫಲವಾಗಿ ದಿನಾಂಕ 29 ಆಗಸ್ಟ್ 2002 ರ ಗೆಜೆಟ್‌ನಲ್ಲಿ ರೂ 1800/- ನ್ನು ಕನಿಷ್ಠ ವೇತನವನ್ನಾಗಿ ನೋಟಿಫೈ ಮಾಡಲಾಗಿದೆ, ಆದರೆ ಒಂದಿಲ್ಲೊಂದು ನೆಪ ಮಾಡಿಕೊಂಡು ಗುತ್ತಿಗೆದಾರರು ಹಾಗು ಪಾಲಿಕೆಯು ಕನಿಷ್ಠ ವೇತನ ಜಾರಿಗೊಳಿಸುವುದನ್ನು ಮುಂದೂಡುತ್ತಲೇ ಬಂದಿದೆ. ಅಂತಿಮವಾಗಿ ಕರ್ನಾಟಕ ಉಚ್ಚನ್ಯಾಯಾಲಯವು ಹೊಸ ಗುತ್ತಿಗೆ ನಿಭಂದನೆಗನುಗುಣವಾಗಿ ಕನಿಷ್ಠ ವೇತನ ಹಾಗು ಇತರ ಸೌಲಭ್ಯಗಳನ್ನು ನೀಡಲೇ ಬೇಕೆಂದು ದಿನಾಂಕ 4 ಮೇ 2003 ರಂದು ತೀರ್ಪು ನೀಡಿತು. ಜೂನ್ ತಿಂಗಳಿನಿಂದ ಕನಿಷ್ಠ ವೇತನ ನೀಡುವುದಾಗಿ ಆಶ್ವಾಸನೆಯೂ ಸಿಕ್ಕಿತು, ಆದರೆ ಈಗ ಗುತ್ತಿಗೆದಾರರು 1200, 1300 ರೂ ಕೊಡುತ್ತೇವೆ,ಬೇಡವಾದರೆ ಕೆಲಸದಿಂದ ತೆಗೆದು ಹಾಕುವುದಾಗಿ ಬೆದರಿಸುತ್ತಿದ್ದಾರೆ. ಬೆಂಗಳೂರು ಮಹಾನಗರ ಪಾಲಿಕೆಯೂ ಸಹ ಏನು ಕ್ರಮ ಜರುಗಿಸದೆ ಕೈ ಚೆಲ್ಲಿ ಕೂತಿದೆ. ಪಾಲಿಕೆ ಹಾಗು ಗುತ್ತಿಗೆದಾರರು ಇಬ್ಬರೂ ಉಚ್ಚ ನ್ಯಾಯಲಯದ ತೀರ್ಪನ್ನು ಉಲ್ಲಂಘಿಸಿವೆ.

ನಗರ ಪಾಲಿಕೆಯು ಸರ್ಕಾರದ ಒಂದು ಸಂಸ್ಥೆಯಾಗಿಯೂ ಕಾನೂನನ್ನು ಎತ್ತಿ ಹಿಡಿಯುವಲ್ಲಿ ತೋರಿರುವ ವೈಫಲ್ಯವು, ಸರ್ಕಾರಕ್ಕೆ ಕಾನೂನಿನ ಬಗ್ಗೆ ಇರುವ ಗೌರವವನ್ನು ಸೂಚಿಸುತ್ತದೆ. ತುಳಿತಕ್ಕೊಳಗಾದ ದಲಿತ ಸಮುದಾಯದ ವಿರುದ್ಧ ಸರ್ಕಾರಿ ಸಂಸ್ಥೆ ತೋರಿರುವ ಅವಗಣನೆಯಾಗಿದೆ. ಖಂಡಿತವಾಗಿಯೂ ನಮ್ಮ ಸರ್ಕಾರ ಬಡ, ದಲಿತ ಕಾರ್ಮಿಕರ ವಿರೋಧಿ ಎಂಬ ಭಾವನೆ ಮೂಡಿಸುತ್ತಿದೆ.

ಕಾನೂನು ಬದ್ಧವಾಗಿ ಪೌರಕಾರ್ಮಿಕರು ತಮ್ಮ ಹಕ್ಕುಗಳನ್ನು ಪಡೆದುಕೊಳ್ಳಲು ದಶಕದಿಂದಲೂ ತಾಳ್ಮೆಯಿಂದ ಹೋರಾಡುತ್ತಾ ಬಂದಿದ್ದಾರೆ. ಅನ್ಯಾಯವನ್ನು ಸಹಿಸಿಕೊಂಡು, ಸಿಟ್ಟನ್ನು ತಡೆದುಕೊಂಡು ಕತ್ತೆಗಳಂತೆ ದುಡಿಯುತ್ತಿದ್ದಾರೆ. ಅವರ ತಾಳ್ಮೆಗೂ ಒಂದು ಮಿತಿಯಿದೆ, ಹೀಗೆಯೇ ಅನ್ಯಾಯ ಮುಂದುವರೆಯಲು ಸಾಧ್ಯವಿಲ್ಲ. ಇಂದು ಹಮ್ಮಿಕೊಂಡಿರುವ ಪ್ರತಿಭಟನೆ ಪೌರಕಾರ್ಮಿಕರು ಇರುವ ಹಾಗೂ ಗೌರವದ ಬದುಕು ಬದುಕುವ ಹಕ್ಕು ದಲಿತ ಹಾಗೂ ಮಹಿಳೆಯರಾದ ನಮಗೂ ಇದೆ ಎಂದು ಪಾಲಿಕೆಯ ಅಧಿಕಾರವರ್ಗಕ್ಕೆ ಹಾಗೂ ಸರ್ಕಾಕ್ಕೆ ಸೂಚಿಸುವುದೇ ಆಗಿದೆ.

ಸರ್ಕಾರ ಸೂಕ್ತ ಕ್ರಮ ಜರುಗಿಸಿ ನ್ಯಾಯಬದ್ಧ ಕನಿಷ್ಠ ವೇತನವನ್ನು ಚೆಕ್ ಮೂಲಕ ಪಾವತಿಸಲು ಆದೇಶಿಸಿ ಖೂಳ ಗುತ್ತಿಗೆದಾರರ ಹಾಗು ಭ್ರಷ್ಟ ಅಧಿಕಾರಿಗಳ ಸಂಚಿನ ಕೂಟದಿಂದ ಕಾರ್ಮಿಕರಿಗೂ ಬಿಡುಗಡೆ ದೊರಕಿಸಿಕೊಡಬೇಕೆಂದು ಮನವಿ ಮಾಡಿಕೊಳ್ಳುವ ಮೂಲಕ ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ಅರ್ಥವನ್ನು ಎತ್ತಿ ಹಿಡಿಯಬೇಕೆಂದು ಒತ್ತಾಯಿಸಿದ್ದಾರೆ.

**ಕನಿಷ್ಠ ವೇತನ ಸಿಗುವವರೆಗೂ ಹೋರಾಟ ನಿಲ್ಲದು**

- ವರದಿ

# ವರ್ತುಲ

ಸಶಬ್ದ ಬಿಕ್ಕಳಿಕೆಯ ಆ ಸಂಜೆ
ನಾನು ಅಂದಿದ್ದೇನೋ,
ಈತ ಮೆತ್ತಗೆ ನೆತ್ತಿ ನೇವರಿಸಿ ಅಂದ
"ನಾಳೆ ಮುಂಜಾನೆಯಿಂದ ಸಂಜೆ
ಮಕ್ಕಳ ಹೊಣೆ ನನಗಿರಲಿ"
ಒಂದು ಬಿಸಿಮುತ್ತು, ಬೆಚ್ಚಗಿನ ಹಿಡಿ
ಗಟ್ಟಿ ಭರವಸೆಯಲ್ಲಿ ಆ ಬೆಳಗು.
ಮುಂಜಾನೆ ಕದವಿಕ್ಕಿದ ಮನೆಯಲ್ಲಿ ಏಕಾಕಿ
ಮನಸು ಹೊರ ಹೋದ ಮಕ್ಕಳ
ಬೆನ್ನು ಹತ್ತಿ ಅಲೆಯುತ್ತಿದೆ - ಹಸಿದ ನಾಯಿ.
ಎಲ್ಲ ಲಗುಬಗೆ ಮುಗಿಸಿ
ಕೂಡಬೇಕು ನಿಶ್ಚಿಂತ
ಮಳೆಗಾಲದ ಮಧ್ಯಾಹ್ನ
ಗಂಜಿ ಕುಡಿದು ಕುಮಾರವ್ಯಾಸ ಓದಿದ ದಿನಗಳಂತೆ
ಅಂದುಕೊಂಡಿದ್ದೇ ಬಂತು.

ಡಬ್ಬಿ ಸಂದಿಯಲಿ ಒಂದು ಹಲ್ಲಿ
ಬಾಲ ಬಡಿಯಿತು.

ಧೂಳು ಒರೆಸುತ್ತ ಗುಡಿಸುತ್ತ
ಒಂದೊಂದೇ ಕೋಣೆ ಸರಿಪಡಿಸಿ...
ಮುಸ್ಸಂಜೆ ಮಕ್ಕಳ ದನಿಗೆ ತಡಬಡಿಸಿದೆ.
ನಗುವ ಮಕ್ಕಳ ಹಿಂದೆ ಸುಸ್ತಾದ ಈತ
ನಗೆಯ ಬೆಳಕನ್ನೆಲ್ಲೂ ಬಚ್ಚಿಡದಂತೆ ನಕ್ಕೆ
ನಾ ಕೃತಜ್ಞೆ !

ಕಣ್ಣಂಚಿನದೊಂದು ಪುಟ್ಟ ಹನಿ ನುಂಗಿ
ಉಪ್ಪು ದನಿಗೊಂದಿಷ್ಟು ನೀರುಣಿಸಿ ಸರಾಗವಾದೆ.
ನಡುರಾತ್ರಿ ಯಾವುದೋ ಜಾವದಲಿ
ಬಡಿವ ಬಾವಲಿ ಮನಸು
ಬೆಳಗಿನ ಸತ್ಯಕ್ಕೆ ನೇತುಕೊಂಡಂತೆ
ಮತ್ತೆ ವರ್ತುಲ ಸಿದ್ಧ !
ನಿದ್ದೆಯಲ್ಲಿದ್ದವನ ಎದೆ ಮೇಲೆ
ಕಣ್ಣೀರಿನಿಂದ ಬರೆದೆ.
'ಕೇಂದ್ರಬಿಂದುವಿಗೆಂದೂ ಚಲನೆಯಿಲ್ಲ ದೊರೆ'

- ಡಾ. ವಿನಯಾ.

ಮೀಸಲಾತಿಯಲ್ಲಿ ಒಳಮೀಸಲಾತಿಯನ್ನು ಕೇಳುತ್ತಿರುವ ಲೋಹಿಯಾ ವಾದಿಗಳಾದ ಸಮತಾ ಪಕ್ಷ, ಬಿ.ಎಸ್.ಪಿ ಶಿವಸೇನೆ ಪಕ್ಷಗಳೂ ಕೂಡ ಮಹಿಳಾ ಪರವಾದಿಗಳೆಂದು ನಂಬುವಂತಿಲ್ಲ. ಮೂರು ದಶಕಗಳಿಗೂ ಹೆಚ್ಚು ಕಾಲದ ದಲಿತ ಚಳುವಳಿಯಲ್ಲಿ ಮಹಿಳಾ ನಾಯಕರು ರೂಪು ಗೊಂಡಿಲ್ಲ. ಅಧಿಕಾರದ ರುಚಿಕಂಡ ಮೇಲ್ವರ್ಗದ ಕೆಳಜಾತಿ ಜನರು ತಮ್ಮ ಮಹಿಳೆಯರನ್ನು ಸಂಘಟಿಸುವ ಪ್ರಯತ್ನ ಮಾಡುವಲ್ಲಿ ಸಂಪೂರ್ಣ ಸೋತಿವೆ.

ಮಹಿಳಾ ಮೀಸಲಾತಿಯಿರಲಿ, ಯಾವುದೇ ಮೀಸಲಾತಿ ಅರ್ಥಪೂರ್ಣವಾಗಬೇಕಾದರೆ ಸಾಮೂಹಿಕ ಜನ ಚಳುವಳಿಯಿಂದ ನಾಯಕರು ಮೂಡಿಬರಬೇಕು. ಇಲ್ಲದಿದ್ದರೆ ಅಧಿಕಾರದಲ್ಲಿರುವ ಅಪ್ಪ, ಗಂಡ, ಮಗು, ಸಂಬಂಧಿಗಳಾಗಿ ಮಾತ್ರ ಮಹಿಳೆಯರು ಅಧಿಕಾರದ ಗದ್ದುಗೆ ಗೇರಿದಂತಾಗುತ್ತದೆ.

**ಸಂಪಾದಕೀಯ**

(ಅಚಲ ಮೇ ಸಂಚಿಕೆ)

### ಇರಾಕ್ ಕುರಿತ ಅಂತರಾಷ್ಟ್ರೀಯ ಮಹಿಳಾ ಐಕ್ಯರಂಗ

# ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿ ಕೋಫಿ ಅನ್ನಾನ್‌ಗೆ ಬಹಿರಂಗ ಪತ್ರ

ಅಮೇರಿಕದ ಯುದ್ಧ - ಸದ್ಯಕ್ಕೆ ವಿರಾಮಗೊಂಡಿದೆಯಾದರೂ, ಆಗಾಗ್ಗೆ ಇರಾಕಿನಲ್ಲಿ ಶತ್ರು ಸದೆ ಬಡಿಯುವ ಹೆಸರಿನಲ್ಲಿ - ಸೈನ್ಯ ಪಡೆಗಳು, ಮಿಲಿಟರಿ ಆಚರಣೆ ನಡೆಸುತ್ತಲೇ ಇವೆ. ಈ ಮಿಲಿಟರಿ ಆಚರಣೆಗಳಲ್ಲಿ ಸದ್ದಾಂ ಹುಸೇನನ ಮಕ್ಕಳು ಮಾತ್ರವಲ್ಲ. ಹೆಸರಿರದ ಅನೇಕ ಇರಾಕಿ ನಾಗರಿಕರು ಸಾಯುತ್ತಿದ್ದಾರೆ. ಹೆಣಗಳು ಅನಾಥವಾಗಿ ಇರಾಕಿ ರಸ್ತೆಯಲ್ಲಿ ಬಿದ್ದಿರುತ್ತವೆ. ಜೀವಕ್ಕೆ ಬೆಲೆ ಇಲ್ಲ.ಸಾವಿಗೆ ಅಳುವವರು ಇಲ್ಲ. ಶವಕ್ಕೆ ಸಂಸ್ಕಾರಗಳಿಲ್ಲ. ಈ ಯುದ್ಧ, ಯುದ್ಧದ ಹೆಸರಿನ ಘರ್ಷಣೆಗಳು ನಮಗೆ ಬೇಕೆ? ಅಮೇರಿಕ ಇರಾಕ್ ಮೇಲೆ ಯುದ್ಧ ಸಾರಿದಾಗ ಇರಾಕ್ ಕುರಿತ ಅಂತರರಾಷ್ಟ್ರೀಯ ಮಹಿಳಾ ಐಕ್ಯರಂಗ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಕೋಫಿಅನಾನ್‌ಗೆ ಬಹಿರಂಗ ಪತ್ರ ಬರೆದಿದ್ದು, ಮಹಿಳೆಯರು ಬಯಸುವ ಶಾಂತಿ ಸಂದೇಶವನ್ನು ಎತ್ತಿ ಹಿಡಿಯುತ್ತದೆ. ಈ ಸಂದೇಶ ಈಗಲೂ ಪ್ರಸ್ತುತ ಎನಿಸಿದ್ದರಿಂದ ಈ ಪತ್ರವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.

**ಮಾನಸ**

### ಮಿಸ್ಟರ್ ಕೋಫಿ ಅನ್ನಾನ್

ಯುದ್ಧದಾಹದ ಈ ಹತಾಷ ಕಾಲದಲ್ಲಿ ತಿಕ್ಕಲು ಹಿಡಿದು ಅದ್ವಾನವಾಗಿ ಹೋಗುತ್ತಿರುವ ಜಗತ್ತಿನಲ್ಲಿ ತಾವು ಮತ್ತು ವಿಶ್ವಸಂಸ್ಥೆ ಕಟ್ಟಕಡೆಯ ಭರವಸೆಗಳ ಪೈಕಿ ಒಂದೆಂದು ಭಾವಿಸುತ್ತೇವೆ.

ಇಂದು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ, ಇರಾಕ್ ಮತ್ತು ಸಮಸ್ತ ಜಗತ್ತಿನ ಮಹಿಳೆಯರ ಪರವಾಗಿ ನಿಮಗೆ ಈ ಪತ್ರ ಬರೆಯುತ್ತಿದ್ದೇವೆ.

ಬುಷ್, ಬ್ಲೇರ್ ವಗೈರೆ ಯುದ್ಧದಾಹಿಗಳು 3 ಲಕ್ಷಕ್ಕೂ ಹೆಚ್ಚು ಸೈನಿಕ ಪಡೆಗಳೊಡನೆ ಇರಾಕಿಗೆ ಮುತ್ತಿಗೆ ಹಾಕಿದ್ದಾರೆ, ಅಗಾಧ ಶಕ್ತಿಯ ಬೆಂಕಿ ಕ್ಷಿಪಣಿಗಳು, ಸಮೂಹ ನಾಶಕ ಶಸ್ತ್ರಾಸ್ತ್ರಗಳು ರುದ್ರ ನರ್ತನಕ್ಕಾಗಿ ಸಜ್ಜಾಗಿ ನಿಂತಿವೆ. ನಾವು ಮಹಿಳೆಯರು ಇರಾಕಿನ ನಗರಗಳಲ್ಲಿ, ಸಂತೆ ಮಾಳಗಳಲ್ಲಿ ನಿಂತು ಶಾಂತಿಗಾಗಿ ದೀಪ ಹಚ್ಚುತ್ತಿದ್ದೇವೆ. ಈ ಕಾನೂನು ಬಾಹಿರ, ಅನೈತಿಕ ಯುದ್ಧದ ವಿರುದ್ಧ ಶಾಂತಿ ದೀಪಗಳ ಉರಿಸುವುದನ್ನು ಮುಂದುವರೆಸುತ್ತೇವೆ.

ಮಾರ್ಚ್ - 8, ಬಾಗ್ದಾದ್ ನಗರದ ತಲ್ಲೈ ಚೌಕದಲ್ಲಿ ಸೇರಿ, ಅಮೇರಿಕ ಮುಂದಾಳತ್ವದ ಇರಾಕ್ ಮೇಲಿನ ಧಾಳಿ ವಿರುದ್ಧ ನಾವು ಶಾಂತಿ ಮಂಡಲಗಳಲ್ಲಿ ನಿಂತಿದ್ದೇವೆ ; ಯುದ್ಧ ವಿರೋಧಿ ಭಿತ್ತಿಪತ್ರಗಳು ಮತ್ತು ಕೊಲ್ಲಿ ಯುದ್ಧದಲ್ಲಿ ಬಳಸಿದ ಯುರೇನಿಯಂ ಇಂಧನ ಬಾಂಬುಗಳ ದೆಸೆಯಿಂದ ಸತ್ತ ಮಕ್ಕಳ ಭಾವಚಿತ್ರಗಳನ್ನ ಹಿಡಿದು, ನರಮೇಧ ಸ್ವರೂಪಿ ಆರ್ಥಿಕ ದಿಗ್ಬಂಧನದಿಂದ ಬಳಲುತ್ತಿರುವ ಮಹಿಳೆರ ಸಾಕ್ಷಿಗಳನ್ನು ಕೇಳಿಸಿಕೊಳ್ಳುತ್ತ, ಪ್ರತಿರೋಧದ ಹಾಡುತ್ತ, ಶಾಂತಿಯ ಕವಿತೆಗಳನ್ನ ಓದುತ್ತ, ಭರವಸೆಯ ಕಥಾನಕಗಳನ್ನು ಹಂಚಿಕೊಳ್ಳುತ್ತ, ಶಾಂತಿಗಾಗಿ ದೀಪಗಳನ್ನ ಹಚ್ಚಿಟ್ಟಿದ್ದೇವೆ, ಆದರೆ ಯಾರು ಕೇಳಿಕೊಳ್ಳುತ್ತಾರೆ ನಮ್ಮ ಧ್ವನಿಗಳನ್ನು ?

ಮಾತಾಡುತ್ತಿರುವ ಅನೇಕ ಧ್ವನಿಗಳ, ಮಾತನಾಡದೆ ಉಳಿದುಹೋದ ಧ್ವನಿಗಳ ಯುದ್ಧ ಕುರಿತ ನಮ್ಮ ಕತೆಗಳನ್ನು ಯಾರು ಕೇಳಿಸಿಕೊಳ್ಳುತ್ತಾರೆ ? ಅತೀವ ವಂಚನೆ, ಪೋಷಕಾಂಶಗಳು ಮತ್ತು ಔಷಧಿ ಕೊರತೆಯಿಂದ ಸಾಯುತ್ತಿರುವ ನಮ್ಮ ಮಕ್ಕಳು, ಆರ್ಥಿಕ ದಿಗ್ಬಂಧನ ಉತ್ಪಾದಿಸಿದ ದಾರುಣ ಕತೆಗಳನ್ನು Unicef ಹೇಳುತ್ತದೆ, ಇರಾಕಿನಲ್ಲಿ ಪ್ರತಿ ತಿಂಗಳು 5 ಸಾವಿರ ಮಕ್ಕಳು ಸಾಯುತ್ತಿದ್ದಾರೆ : ಮಿಸ್ಟರ್ ಅನಾನ್ ಇದು ಜೀವಘಾತುಕ ನರಮೇಧ.

ಇರಾಕಿನಲ್ಲಿ 12 ವರ್ಷಗಳಿಂದಲೂ ಬಳಸುತ್ತಿರುವ ಡಿಪ್ಲೀಟೆಡ್ ಯುರೇನಿಯಂ ಶಸ್ತ್ರಾಸ್ತ್ರಗಳ ದೆಸೆಯಿಂದ ತಾಯಂದಿರು ಮಾನುಷ್ಯ ಗುರುತುಗಳಿಲ್ಲದ ಮಾಂಸದ ಮುದ್ದೆಗಳನ್ನ ಹೆರುತ್ತಿದ್ದಾರೆ ; ದ್ರಾಕ್ಷಿ ಗೊಂಚಲಿನಂತ ಜೀವ ರೂಪಗಳು ಹುಟ್ಟುತ್ತಿವೆ ; ಕೈ ಕಾಲು ತೋಳುಗಳಿಲ್ಲದ ಮಕ್ಕಳು, ಕಣ್ಣು ಕಿವಿಗಳಿಲ್ಲದ ಮಕ್ಕಳು !

ಬಸ್ರಾ ನಗರದ ಮಕ್ಕಳ ಆಸ್ಪತ್ರೆಯಲ್ಲಿ ಮಲಗಿರುವ ಮಗು ಒಮರ್‌ನ ತಲೆಗೆ ಸುತ್ತಿರುವ ಹಳೆಯ ಬಟ್ಟೆ, ಅವನ ಹಣೆ ಒರೆಸಲು ತಾಯಿ ಫದೀಲಾ ಆ ಬಟ್ಟೆ ಬಿಚ್ಚುತ್ತಾಳೆ, ಅವನಿಗೂ ಕಣ್ಣುಗಳಿಲ್ಲ, ಇಣುಕುವ ಎರಡು ನೋಟಗಳು ಮಾತ್ರ, ಒಮರ್‌ಗೆ ಮಿದುಳಿನ ಬಾವು, ಪುಟ್ಟ ತಲೆಯಲ್ಲಿ ವೇದನೆ. ಅವನ ಕಣ್ಣುಗಳನ್ನು ತೆಗೆಯಬೇಕು ಯಾಕೆಂದರೆ ತಲೆಯ ಬಾವುಗಳು ಒತ್ತುತ್ತಿವೆ. ಅವನಿಗೆ ಔಷಧಿ ಅಗತ್ಯವಿದೆ; ಆದರೆ ಧಿಗ್ಬಂಧನ ಔಷಧಿ ಸಿಗದಂತೆ ನೋಡಿಕೊಳ್ಳುತ್ತಿದೆ.

ಇನ್ನೊಂದು ಮಕ್ಕಳ ವಾರ್ಡ್ ಪ್ರವೇಶಿಸಿದೆವು, ಅಬಾಯ ಧರಿಸಿದ ಮಹಿಳೆ ತನ್ನ ತಲೆಗೂದಲು ಕಿತ್ತುಕೊಳ್ಳುತ್ತ 'ನನ್ನ ಮಗು ಸಾಯುತ್ತಿದೆ' ಎಂದು ಕಿರುಚುತ್ತಾ ಓಡಿಹೋದಳು.

ಪುಟ್ಟ ಮಗು ಬಸೀಮ್ ಉಸಿರಿಗೆ ತವಕಿಸುತ್ತಿದ್ದ ; ಅವನ ಸುತ್ತ ನಿಂತ ಡಾಕ್ಟರುಗಳ ಕೈಯ್ಯಲ್ಲಿ ಔಷಧಿಯಿಲ್ಲ, ಆಮ್ಲಜನಕವಿಲ್ಲ.

ಬಸೀಮ್ ರಕ್ತ ಕ್ಯಾನ್ಸರಿನಿಂದ ಸಾಯುತ್ತಿದ್ದ, ಕಳೆದ ಕೆಲವು ವರ್ಷಗಳಿಂದ ಇದು ತೀವ್ರವಾಗಿ ಹೆಚ್ಚಿದೆ. ಬಸೀಮ್ ಕೊನೆಯುಸಿರೆಳೆಯುತ್ತಿದ್ದಾಗ ನಾವೆಲ್ಲ ಸುತ್ತ ನಿಂತಿದ್ದೆವು, ಡಾಕ್ಟರು ಕದ ತೆರೆದು ಖಾಲಿ ಕಪಾಟುಗಳ ತೋರಿಸಿದರು.

ಆಗತಾನೇ ಬಂದ ದಾದಿ ಇನ್ನೊಂದು ಕಪಾಟಿನ ಕದ ತೆರೆದಳು. ಅದು ತುಂಬಿದ್ದಂತೆ ಕಾಣಿಸಿತು; ಆಕೆ ಕದ ಮುಚ್ಚಿದಳು 'ಏನಿದೆ ಅದರಲ್ಲಿ'? ಅಂತಾ ಒಬ್ಬರು ಕೇಳಿದರು, ಆಕೆ ಮತ್ತೆ ಕಪಾಟಿನ ಕದ ತೆರೆದಳು, ಅದು ತುಂಬಿತ್ತು, ಆದರೆ ಕಳೇಬರಗಳಿಗೆ ಹೊಚ್ಚುವ ಬಿಳಿ ಬಟ್ಟೆಗಳಿಂದ.

ಮಕ್ಕಳು ಸಾಯುತ್ತಿದ್ದಾರೆ :

ಇರಾಕಿನ ಮಕ್ಕಳಿಗೆ ಈ ಬುಷ್ ಮತ್ತು ಬ್ಲೇರ್ ಏನು ಹೇಳುತ್ತಾರೆ ?

ತಮ್ಮ ಸ್ವಂತ ಮಕ್ಕಳಿಗೆ ಏನು ಹೇಳುತ್ತಾರೆ ?
ಈ ಮಕ್ಕಳಿಗೆ ನಾವೇನು ಹೇಳುತ್ತೇವೆ ?
ಮಿಸ್ಟರ್ ಅನ್ನಾನ್, ಇರಾಕಿನ ಮಕ್ಕಳು ಸಾಯುತ್ತಿದ್ದಾರೆ

ತಮ್ಮ ಮಕ್ಕಳ ಬಗ್ಗೆ ತಾಯಂದಿರು ಆಡುವ ಮಾತು ಕೇಳಿ
ತಮ್ಮ ನಾಗರೀಕತೆ ಬಗ್ಗೆ ಹೇಳುವ ಕತೆಗಳ ಕೇಳಿ
ದೈನಂದಿನ ಉಳಿವು ಮತ್ತು ಚೈತನ್ಯಗಳ ಕುರಿತು ಹೇಳುವ ಕತೆಗಳನ್ನ ಕೇಳಿಸಿಕೊಳ್ಳಿ.

ತಿಕ್ಕಲು ಹಿಡಿದು ಅಧ್ವಾನವಾಗುತ್ತಿರುವ ಈ ಜಗತ್ತಿನಲ್ಲಿ ಅವರು ಹೇಳುವ ಕರುಣೆ, ಕಾಳಜಿ ಮತ್ತು ಸಂಬಂಧಗಳ ಕತೆ ಕೇಳಿ. ವಿಭಿನ್ನ ಕತೆಗಳನ್ನ ಹೇಳುತ್ತಾರೆ. ಯಾಕೆಂದರೆ ಅವರ ಕಣ್ಣುಗಳು ಜಗತ್ತನ್ನ ವಿಭಿನ್ನವಾಗಿ ಗ್ರಹಿಸುತ್ತವೆ. ಈ ಜಗತ್ತು ಈ ಕತೆಗಳನ್ನ ಕೇಳಿಸಿಕೊಳ್ಳಬೇಕು, ಅವರ ಕತೆಗಳು ಕಾಳಜಿಯ ನೈತಿಕತೆಯಿಂದ ಮಾತನಾಡುತ್ತಿವೆ. ಮತ್ತೊಂದು ಬಗೆಯ ಜ್ಞಾನ ಮತ್ತು ತರ್ಕವನ್ನು ಮುಂದಿಡುತ್ತವೆ.

ತಾವು ಯುದ್ಧ ತರ್ಕದಲ್ಲಿ ಸಿಕ್ಕಿಕೊಂಡಿರುವಂತೆ ಕಾಣುತ್ತಿದ್ದೀರಿ. ಅಗಾಧ ಬಲಪ್ರಯೋಗವನ್ನ ಸಮ್ಮತಿಸುವ ತರ್ಕದಲ್ಲಿ ಉದ್ಭದ ಈ ಘೋರ ಶಸ್ತ್ರಗಳು ದಿಗ್ಭ್ರಮೆ ಹುಟ್ಟಿಸುತ್ತಿವೆ. ಸಮಸ್ತ ಜನಸಮುದಾಯವನ್ನು ಅಳಿಸಿ ಹಾಕುತ್ತವೆ. ಮಾತಾಗದೇ ಉಳಿದಿರುವುದು, ಮಾನವತೆ ತೆರಬೇಕಾದ ಬೆಲೆ, ಪುರಾತನ ನಾಗರೀಕತೆಯೊಂದರ ಮಾನವೀಯ ಪರಿಣಾಮಗಳು.

ಈ ಯುದ್ಧ ನಮ್ಮನ್ನ ಕೂಡ ಬಿಡುವುದಿಲ್ಲ

ಪ್ರತಿಯೊಬ್ಬರನ್ನೂ ಇದು ಮರಳುಗಾಡಿನ ಕದನ

ಮತ್ತು ಚೆಲ್ಲಿದ ರಕ್ತದಿಂದ ಗುರುತು ಮಾಡುತ್ತದೆ.

ಭೂಮಿಯಿಂದ ಎಲ್ಲ ಸಮೂಹನಾಶಕ ಶಸ್ತ್ರಗಳನ್ನ ನಾಶಪಡಿಸಬೇಕು ಎಂಬ ನಿಮ್ಮ ಇಚ್ಛೆಯೊಂದಿಗೆ ನಾವು ನಿಲ್ಲುತ್ತೇವೆ ; ರಾಸಾಯನಿಕ, ಜೈವಿಕ ಮತ್ತು ಪರಮಾಣು ಶಸ್ತ್ರಗಳನ್ನು ಎಲ್ಲ ದೇಶ, ಪ್ರಭುತ್ವಗಳೂ ನಾಶಪಡಿಸಬೇಕು. ಈ ಪಟ್ಟು ಕೊಂಚ ಸಡಿಲವಾದರೂ ವಿಶ್ವಸಂಸ್ಥೆ ಪ್ರಜಾತಾಂತ್ರಿಕ ಸಂಸ್ಥೆಯಲ್ಲ, ಅಮೇರಿಕ ಮತ್ತು ಪ್ರಬಲ ಸಹಚರ ದೇಶಗಳ ನಿಯಂತ್ರಣದಲ್ಲಿರುವ ಸಂಸ್ಥೆ ಎಂಬ ಅಪಕೀರ್ತಿ ಕಳಂಕಗಳು ತಾಗುತ್ತವೆ.

ವಿಶ್ವ ನ್ಯಾಯಾಲಯ ಮತ್ತು ಹಲವು ಅಂತರ್‍ರಾಷ್ಟ್ರೀಯ ಒಪ್ಪಂದಗಳನ್ನ ಧಿಕ್ಕರಿಸಿ ಅಮೇರಿಕ ಪರಮಾಣು ಶಸ್ತ್ರಗಳನ್ನ ಪೇರಿಸುತ್ತಲೇ ಇದೆ ; ಅಮೇರಿಕದಲ್ಲಿರುವ ಪರಮಾಣು ಶಸ್ತ್ರಗಳು ಅನೇಕ ಸಲ ಜಗತ್ತನ್ನು ನಾಶ ಮಾಡಬಲ್ಲವು.

ಇದು ನಮಗೆಲ್ಲ ಗೊತ್ತು

ಹಿರೋಷಿಮಾ, ನಾಗಸಾಕಿ ನಗರಗಳಲ್ಲಿ ಸಿಡಿಸಿದ ಪರಮಾಣು ಶಸ್ತ್ರಗಳು ನಮಗೆ ಗೊತ್ತು, ಬಿಕಿನಿ ದ್ವೀಪ ಸಮೂಹಗಳಲ್ಲಿ ಅಮೇರಿಕ ಸಿಡಿಸಿದ ಜಲಜನಕ ಬಾಂಬು, ಇದರಿಂದ ಪೆಸಿಫಿಕ್ ಸಾಗರದ ನಡುಗಡ್ಡೆಗಳ ಮಕ್ಕಳಿಗೆ ಏನಾಯಿತೆಂದು ನಮಗೆ ಗೊತ್ತು : ಈಗಲೂ ತಾಯಂದಿರು ಅಲ್ಲಿ ಜೀವದ ಗುರುತು ಕೂಸುಗಳಿಲ್ಲದ ಮಾಂಸ ಮುದ್ದೆಗಳನ್ನು ಹೆರುತ್ತಿದ್ದಾರೆ ; ಈಗಲೂ ಮಕ್ಕಳು ರಕ್ತ ಕ್ಯಾನ್ಸರಿನಿಂದ ಸಾಯುತ್ತಿದ್ದಾರೆ.

ಅಮೇರಿಕ ವಿಯೆಟ್ನಾಮಿನ ಕಾಡಿನ ಮೇಲೆ ಸಿಡಿಸಿದ
'ಏಜೆಂಟ್ ಆರೆಂಜ್' ನಮಗೆ ಗೊತ್ತು
ಕಾಡು ಬಟಾ ಬಯಲಾಗಿದ್ದು ಗೊತ್ತು
ಯುದ್ಧ ನಿಂತ ನಂತರ ಅದೇ ಏಜೆಂಟ್ ಆರೆಂಜನ್ನು
ದಕ್ಷಿಣದ ಮೂರನೆ ಜಗತ್ತಿನ ಹೊಲಗದ್ದೆಗಳಿಗೆ

'ರೌಂಡ್ ಆಫ್ 'ಎಂಬ ಹೆಸರಿನಲ್ಲಿ ಕಳೆ ನಾಶಕವಾಗಿ ಮಾರುತ್ತಿರುವವುದು ಗೊತ್ತು

ಅಮೇರಿಕದ ಎಲ್ಲ ವಿನಾಶಕಾರಿ ಕುತಂತ್ರಗಳು ಗೊತ್ತು.

ಕೊಸೊವೊ, ಅಫಘಾನಿಸ್ತಾನದಲ್ಲಿ ಸಿಡಿಸಿದ ಡಿಪ್ಲೀಟೆಡ್ ಯುರೇನಿಯಂ ಶಸ್ತ್ರಗಳು.

ಈ ಎಲ್ಲ ಸಮೂಹ ನಾಶಕ ಕಗ್ಗೊಲೆಗಳು ಅಪರಾಧಗಳಲ್ಲವಾ ?

ಈ ಎಲ್ಲ ಅಪರಾಧಗಳಿಗಾಗಿ ಅಮೇರಿಕ ಮತ್ತು ಸಹಚರ ದೇಶಗಳನ್ನ ಯಾರು ದಂಡಿಸಿದರು ?

ಪೆಸಿಫಿಕ್ ದ್ವೀಪವಾಸಿಗಳ ನ್ಯಾಯ-ಪರಿಹಾರಕ್ಕಾಗಿ ಯಾರನ್ನ ಕೇಳಬೇಕು ?

ಅಫಘಾನಿಸ್ತಾನದ ಜನರ ಮಾತುಗಳನ್ನು ಯಾವ ನ್ಯಾಯಾಲಯ ಕೇಳಿಸಿಕೊಳ್ಳುತ್ತದೆ ?

ಇದಕ್ಕಾಗಿ ಅಮೇರಿಕದ ವಿರುದ್ಧ ಯಾರಾದರೂ ದಿಗ್ಬಂಧನ ಹೇರಿದ್ದಾರಾ ?

ಯಾರಿಗಿದೆ ಈ ಧೈರ್ಯ ?

ಆದರೆ ಜಗತ್ತಿನ ಮಿಲಿಯಗಟ್ಟಳೆ ಜನ ಎದ್ದು ನಿಂತಿದ್ದಾರೆ, ಮಿಲಿಯಗಟ್ಟಳೆ ಜನ ನಗರಗಳ ಬೀದಿ, ಚೌಕಗಳಲ್ಲಿ ನಿಂತು ಸಮ್ಮತವಲ್ಲದ ಯುದ್ಧದ ವಿರುದ್ಧ ಧೈರ್ಯವಾಗಿ ಮಾತನಾಡುತ್ತಿದ್ದಾರೆ

ಇರಾಕಿನ ಆಡಳಿತ ಬದಲಿಸಲು ಅಮೇರಿಕ ಮಾಡಿದ ಧಾಳಿ ದ್ವೇಷದ ಸಂದೇಶ, ನಾಯಕತ್ವ ಬಲಿತೆಗೆದುಕೊಳ್ಳುವ (de-capitation) ಕೃತ್ಯ ವಿಶ್ವಸಂಸ್ಥೆ ಶಾಸನದ ಎದ್ದು ಕಾಣುವ ಉಲ್ಲಂಘನೆ, ನ್ಯೂರೆನ್ ಬರ್ಗ್ ಶಾಸನ ಮತ್ತು ಅಂತರ್ರಾಷ್ಟ್ರೀಯ ಕಾನೂನುಗಳ ಉಲ್ಲಂಘನೆ.

ಭದ್ರತಾ ಮಂಡಳಿಯ ನಿರ್ಣಯ - **1441** ಇರಾಕಿನ ವಿರುದ್ಧ ಧಾಳಿ ಮಾಡುವ ಅಧಿಕಾರ ಕೊಡುವುದಿಲ್ಲ ಅಂತ ತಮಗೆ ಚೆನ್ನಾಗಿ ಗೊತ್ತು. ಆಜ್ಞಾನುವರ್ತಿಯಾಗಲು ಒಲ್ಲದ್ದಕ್ಕೆ ಗಂಭೀರ ಪರಿಣಾಮಗಳು ಫಲಿಸುತ್ತವೆ ಎಂಬುದು ಯಾವುದೇ ದೃಷ್ಟಿಯಿಂದಲೂ ಯುದ್ಧಕ್ಕೆ ಕೊಟ್ಟ ಸಮ್ಮತಿ ಎಂದು ಅರ್ಥಮಾಡಿಕೊಳ್ಳಲಾಗುವುದಿಲ್ಲ ; ಮಾಡಿಕೊಳ್ಳಬಾರದು. ಇರಾಕ್ ಮೇಲೆ ಧಾಳಿ ಮಾಡಲು ಅಮೇರಿಕಾಗೆ ಕಾನೂನಾತ್ಮಕ ಅಧಿಕಾರವಿಲ್ಲ, ಆದ್ದರಿಂದ ಇದು ಕಾನೂನು ಬಾಹಿರ ಯುದ್ಧ, ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲದ ಅನೈತಿಕ ಯುದ್ಧ :

ತಾವು UNSCOMಮತ್ತು ಅಂತರ್ರಾಷ್ಟ್ರೀಯ ಪರಮಾಣು ಆಯೋಗ (IAEA)ದಿಂದ, 'ಯಾವುದೇ ರೀತಿಯ ಸಮೂಹ ನಾಶಕ ಶಸ್ತ್ರಗಳು ಸಿಕ್ಕಿಲ್ಲ' ಎಂಬ ವರದಿ ಪಡೆದುಕೊಂಡಿದ್ದೀರಿ: ಬಂದೂಕು ಹೊಗೆ ಉಗುಳುತ್ತಿಲ್ಲ.

ಹ್ಯಾನ್ಸ್ ಬ್ಲಿಕ್ಸ ಮತ್ತು ಅವರ ತಂಡ ಆಲ್-ಸಮುದ್ ಕ್ಷಿಪಣಿಗಳನ್ನ ಬಿಚ್ಚಿ ನಾಶಗೊಳಿಸಿದ್ದನ್ನು ನೋಡಿದ್ದೀರಿ : ದೇಶವೊಂದರ ರಕ್ಷಣಾ ವ್ಯವಸ್ಥೆಗಳನ್ನ ವ್ಯವಸ್ಥಿತವಾಗಿ ಬಿಚ್ಚಿ ಬೆತ್ತಲು ಮಾಡಿದ್ದನ್ನು ಕಂಡಿದ್ದೀರಿ ; ಎಲ್ಲಕ್ಕಿಂತ ಮಿಗಿಲಾದ್ದು ನಾಗರೀಕತೆಯೊಂದರ ಘನತೆ. ಅಮೇರಿಕದ ಬೆದರಿಕೆ, ಕೆಲವು ದೇಶಗಳಿಗೆ ಕೊಟ್ಟ ಲಂಚ ರುಷುವತ್ತುಗಳ ಬಗ್ಗೆ ತಮಗೆ ಗೊತ್ತಿತ್ತು.

ವಿಶ್ವಸಂಸ್ಥೆ ಅಪ್ರಸ್ತುತ ಎಂಬ ಬುಷ್‌ನ ಟಾಂಟುಗಳನ್ನು ಕೇಳಿದ್ದೀರಿ, ತಮಗೆ ಮತ್ತು ವಿಶ್ವಸಂಸ್ಥೆಗೆ ಫೋರ್ಜರಿ ಮತ್ತು ಖೊಟ್ಟಿ ದಾಖಲೆಗಳನ್ನ ತೋರಿಸಿ ಆತ ಸವಾಲು ಹಾಕಿದ್ದಾನೆ. ಅಪಹಾಸ್ಯ ಮಾಡಿದ್ದಾನೆ, ಕೀಳಾಗಿ ನಡೆದುಕೊಂಡಿದ್ದಾನೆ ವಿಶ್ವಸಂಸ್ಥೆಯನ್ನ ತಿರಸ್ಕರಿಸಿದ್ದಾನೆ; ಕೊನೆಗೆ ನಿಶ್ಚಲ ಸ್ಥಿತಿಗೆ ತಂದು ನಿಲ್ಲಿಸಿದ್ದಾನೆ. ಆತ ಹಾಗೆ ಮಾಡುವಾಗ ತಾವು ಸುಮ್ಮನಿದ್ದಿರಿ ; ನಂತರ ಮಿಲಿಟರಿ ತೆರವು ವಲಯ (demilitarised zones) ಗಳಿಂದ ವಿಶ್ವಸಂಸ್ಥೆ ಸಿಬ್ಬಂದಿಯನ್ನ ಹಿಂದಕ್ಕೆ ಕರೆಸಿಕೊಂಡಿರಿ.

ಮಾನವೀಯ ನೆರವು ಸಂಘ ಸಂಸ್ಥೆಗಳು ಅಲ್ಲಿಂದ ತೆರಳುವುದನ್ನ ಉತ್ತೇಜಿಸಿದಿರಿ ಮತ್ತೆ ಇರಾಕಿಗೆ ಬರುತ್ತಿರುವ ಶಸ್ತ್ರ ಪರೀಕ್ಷಕರನ್ನು ಬರಮಾಡಿಕೊಳ್ಳುವಂತೆ ಕಳೆದ ವರ್ಷ ಅಕ್ಟೋಬರ್‌ನಲ್ಲಿ ಕೇಳಿಕೊಂಡಿರಿ ,ಆದರೂ ಏಕಪಕ್ಷೀಯವಾಗಿ ಅವರು ಹಿಂದಿರುಗುವಂತೆ ಆಜ್ಞೆ ಮಾಡಿದಿರಿ ; ಅಮೇರಿಕದ ಭೀಕರ ದಾಳಿಗೆ ಹಾದಿ ಮಾಡಿಕೊಟ್ಟರಿ. ಶಸ್ತ್ರಾಸ್ತ್ರ ಪರೀಕ್ಷಕರು ತಮ್ಮ ಜವಾಬ್ದಾರಿಯಲ್ಲಿ ವಿಫಲರಾಗಲಿಲ್ಲ. ಆದರೂ ಇರಾಕಿನಿಂದ ಹೊರಬರುವಂತೆ ಹೇಳಿದಿರಿ ; ಬುಷ್ ಮತ್ತು ಬ್ಲೇರ್‌ನ ಅಳತೆ ಮೀರಿದ, ಲಂಗುಲಗಾಮಿಲ್ಲದ ಯುದ್ಧಕ್ಕೆ ಚಲ ಕೊಟ್ಟರಿ. ಇದು ಹೊಸ ಬಗೆಯ ಯುದ್ಧ, ಪೂರ್ವಭಾವಿ ಧಾಳಿ (Pre emptive strike) ಎಂಬ ಹೊಸ ತತ್ವದಲ್ಲಡಗಿದ ಯುದ್ಧ; ನಮ್ಮನ್ನ ಕಲ್ಪಿಸಿಕೊಳ್ಳಲು ಕೂಡ ಸಾಧ್ಯವಿಲ್ಲದ ದಿಗಂತಗಳೆಡೆಗೆ ಕರೆದೊಯ್ಯುತ್ತದೆ. ನಮಗೆಲ್ಲ ಚೆನ್ನಾಗಿ ಗೊತ್ತು ಇರಾಕಿನಲ್ಲಿ ಪ್ರಾರಂಭವಾಗಿರುವ ಬುಷ್ ಮತ್ತು ಬ್ಲೇರ್‌ನ ಯುದ್ಧ ಇಡೀ ಪ್ರದೇಶ ಮತ್ತು ಜಗತ್ತಿಗೆ ಆವರಿಸಿಕೊಳ್ಳುತ್ತದೆ.

ಈಗ ನಾವು ಯುದ್ಧ ಅಪರಾಧಗಳ ಕಡೆ ನೋಡಬೇಕು, ಜೊತೆಗೆ ಅಪರಾಧಗಳ ಯುದ್ಧದ ಕಡೆಗೆ, ಯುದ್ಧ ಬೆದರಿಕೆ ಖಂಡಿತವಾಗಲೂ ಯುದ್ಧ ಅಪರಾಧ, ಸಮಸ್ತ ಜನತೆ ವಿರೋಧಿ ಅಪರಾಧ.

ಇದ್ದಕ್ಕಿದ್ದಂತೆ ನಿಮಗೆ ಕಾಲ ಮುಖ್ಯವಾಗಿ ಬಿಟ್ಟಿತು. ಶಸ್ತ್ರಾಸ್ತ್ರ ಪರೀಕ್ಷಕರಿಗೆ ಕಾಲದ ಗಡುವು ಮುಗಿದಿತ್ತು. ಭದ್ರತಾ ಮಂಡಳಿಯ ಯಾವ ನಿರ್ಣಯದಲ್ಲಿ ಕೆತ್ತಲಾಗಿದೆ ಸ್ವಾಮಿ, ಕಾಲದ ಈ ಗಡುವನ್ನು ? ಇದು ರಾಜಕೀಯ ಬೆದರಿಕೆಯ ಹೀನ ಕೃತ್ಯ. ಇದರಿಂದ ವಿಶ್ವಸಂಸ್ಥೆಗೂ ಹಾನಿ ಮಾಡಿದಿರಿ, ನಿಮಗೂ ಹಾನಿ ಮಾಡಿಕೊಂಡಿರಿ.

ಮಿಸ್ಟರ್ ಕೋಫಿ ಅನ್ನಾನ್

ತಾವು ಇರಾಕ್ ಜನತೆಗೆ ದ್ರೋಹ ಬಗೆದಿರಿ

ಇದು ಸಮಸ್ತ ಜಗತ್ತಿಗೆ ಬಗೆದ ದ್ರೋಹ

'ಶಸ್ತ್ರಾಸ್ತ್ರ ಪರೀಕ್ಷೆಗೆ ಇರಾಕ್ ಒಪ್ಪಿಗೆ ಕೊಟ್ಟರೆ ಮಿಲಿಟರಿ ಧಾಳಿ ಮಾಡುವುದಿಲ್ಲ' ಅಂತಾ ವಿಶ್ವಸಂಸ್ಥೆ ಖಚಿತಪಡಿಸಿರಲಿಲ್ವಾ? ಅಥವಾ ಇದೊಂದು ಪ್ಯಾಕೇಜ್ ಡೀಲೋ ಹ್ಯಾಗೆ ?

ಅಡ್ಡಾದುಡ್ಡಿಯಾದ ವೈಮಾನಿಕ ಧಾಳಿ, ಇರಾಕನ್ನು ಸರ್ಪಗಾವಲಲ್ಲಿ ಇಟ್ಟಿರುವ ಬೇಹು ವಿಮಾನಗಳು, ದೇಶದ ಪ್ರತಿ ಅಂಗುಲದ ನಕಾಶೆ ತಯಾರಿಕೆ, ಮುಂದುವರಿದ ಮಾನಸಿಕ ಬೆದರಿಕೆ - ಏನಿದು ಅಪಪ್ರಚಾರ ಯುದ್ಧ ? ಇರಾಕಿನ ಹಾರಾಟ ನಿರ್ಬಂಧಿತ ವಲಯದಲ್ಲಿ ಇರಾಕ್ ವಿಮಾನಗಳಿಗೆ ಮಾತ್ರ ನಿರ್ಬಂಧ, ಆದರೆ ಅಲ್ಲಿ ಅಮೇರಿಕದ ವಿಮಾನಗಳು ಹಾರಾಡುವುದು ಅದರ ಅಭಿಲಾಷೆ. 12 ವರ್ಷಗಳ ನರಮೇಧ ಸ್ವರೂಪಿ ದಿಗ್ಬಂಧನ, ಪ್ರತಿರೋಧಿಸುವ ಹಕ್ಕು ಕೂಡ ಇಲ್ಲದಂತೆ ರಕ್ಷಣಾ ವ್ಯವಸ್ಥೆಯನ್ನು ನಿರಸ್ತ್ರಗೊಳಿಸಿದಿರಿ.

ಎಲ್ಲರೂ ಯುದ್ಧೋತ್ತರ ಕಾಲದ ಬಗ್ಗೆ ಮಾತನಾಡಲು ಶುರು ಮಾಡಿಕೊಂಡಿದ್ದಾರೆ: ಇರಾಕನ್ನು ದುರಸ್ತಿ ಮಾಡುವಂತೆ ಬ್ಲೇರ್ ಅಂತರ್ರಾಷ್ಟ್ರೀಯ ಸಮುದಾಯಕ್ಕೆ ಕರೆ ಕೊಡುತ್ತಾನೆ ; ಇದು ದುರಹಂಕಾರದ ಮಾತು. ಯುದ್ಧವನ್ನ ಸೃಷ್ಟಿಸುತ್ತಾರೆ, "ವಿಶ್ವಸಂಸ್ಥೆಗೆ ಮುಖ್ಯ ಪಾತ್ರವಿದೆ "ಅಂತ ಹೇಳುತ್ತಾರೆ : ಹತ್ಯಾಕಾಂಡ, ನರಮೇಧದ ನಂತರ ಯಾವ ಸೀಮೆಯ ಮುಖ್ಯಪಾತ್ರ ? ಮೊದಲೇ ಏನಾಗಿತ್ತು ? ಈ ಬುಷ್ ಮತ್ತು ಬ್ಲೇರ್ ಮಾತಾಡಿದರೆ ಒಂದೇ ಬಾಯಿ ಮಾತನಾಡಿದಂತೆ ಕಾಣುತ್ತದೆ. ಸತ್ಯವನ್ನ ತಿರುಚಿ, ತುಂಬಾ ಸುಲಭವಾಗಿ ಒದರುವ ಸೀಳುನಾಲಿಗೆಗಳು

ಅಷ್ಟು ದುರಂತವಲ್ಲದಿದ್ದರೆ ಇದು ಅಸಂಗತ ರಂಗದ ಇನ್ನೊಂದು ದೃಶ್ಯ. ಬುಷ್ ಇತ್ತೀಚೆಗೆ ಇದನ್ನ ಅಫಘಾನಿಸ್ತಾನದಲ್ಲಿ ಮಾಡಿದ. ಜಗತ್ತಿನ ಸಿರಿಯ ಗರಬಡಿದ ದೇಶ, ಜಗತ್ತಿನ ಕಡುಬಡವ ದೇಶದ ಮೇಲೆ ಬಾಂಬಿನ ಧಾಳಿ ಮಾಡುತ್ತದೆ. ಅದನ್ನು ನಾಗರೀಕತೆಯ ಯುದ್ಧ ಅಂತಾ ಕರ್ರ್ಯೋತಾರೆ. ಒಸಮಾ ಬಿನ್ ಲಾಡೆನ್‌ನನ್ನು ಹುಡುಕುವ ಕುಂಟುನೆವ ಮುಂದುಮಾಡುತ್ತಾರೆ.

ಸಮಸ್ತ ದೇಶ ಮತ್ತು ಜನರನ್ನ ಛಿದ್ರಗೊಳಿಸಿದ ಅವನು ಈಗ ಇದು "ಬಿಡುಗಡೆಗಾಗಿ ಯುದ್ಧ" ಅಂತಾ ಕರ್ರ್ಯೋತಿದಾನೆ. ಭಯಾನಕವಾದ, ನಿಖರವಾಗಿ ಗುರಿಮುಟ್ಟುವ ಶಸ್ತ್ರಗಳ ಬಳಕೆಯ ಪ್ರಮಾಣ ಮಾಡುತ್ತಾನೆ. ಮಿಲಿಟರಿ ಚರಿತ್ರೆ ಹಿಂದೆಂದೂ ಕಾಣದ ಪ್ರಮಾಣದಲ್ಲಿ ರಾಶಿ ಬಿದ್ದಿರುವ ವಂಚನೆ ಮತ್ತು ವಿನಾಶ, ಇದು ಇರಾಕಿನ ಮತ್ತು ಜಗತ್ತಿನ ಸಾವು.

ಈ ಯುದ್ಧದ ವೆಚ್ಚ ಭರಿಸುವವರು ಯಾರು ? ಸತ್ತ ಸಹಸ್ರಾರು ಜನರ ಕತೆ ಏನು ?

ನೆಲೆ ತಪ್ಪಿ ನಿರಾಶ್ರಿತರಾಗುತ್ತಿರುವ ಮಿಲಿಯಗಟ್ಟಳೆ ಜನರ ಬಗ್ಗೆ ನಾವು ಮಾತನಾಡುತ್ತಿದ್ದೇವೆ . ಆಸ್ತಿಪಾಸ್ತಿ ನಾಶದ ಬಗ್ಗೆ ಮಾತನಾಡುತ್ತಿವೆ ವಾಷಿಂಗ್ಟನ್ನಿನ ಸೀಳು ನಾಲಿಗೆಗಳು :

ನಿಖರ ಗುರಿ ಕ್ಷಿಪಣೆ ಮತ್ತು ಬಾಂಬುಗಳ ಬಳಸಿದ ನಮ್ಮ ಯುದ್ಧಗಳು ಮಾನವೀಯ ಮಧ್ಯಪ್ರವೇಶ ಪ್ರಜಾಸತ್ತೆ ನಾಗರೀಕ ಹಕ್ಕುಗಳಿಗಾಗಿ ಯುದ್ಧ, ಇದು ಆಪರೇಷನ್ ಇರಾಕಿ ಫ್ರೀಡಂ

ಯಾರಿಗಾಗಿ ಸ್ವಾತಂತ್ರ್ಯ ?ಯಾರ ಬಿಡುಗಡೆ ? ಎಂತ ಬಿಡುಗಡೆ ? ಯಾವ ಬೆಲೆ ತೆತ್ತು ಈ ಬಿಡುಗಡೆ ?

ನಿಮಗೆ ನೆನಪಿರಬಹುದು ಆರ್ಥಿಕ ದಿಗ್ಬಂಧನದ ದೆಸೆ ಇರಾಕಿನಲ್ಲಿ ಪ್ರತಿದಿನ 5 ಸಾವಿರ ಮಕ್ಕಳು ಕೊಲೆಯಾಗುತ್ತಿದ್ದಾರೆ, ಇದು ತೆರಬೇಕಾಗಿದ್ದ ಬೆಲೇನಾ ? ಅಂತಾ ಅಂದಿನ ಅಮೇರಿಕ ಸರ್ಕಾರದ ಕಾರ್ಯದರ್ಶಿ ಮೆಡಲೀನ್ ಆಲ್‌ಬ್ರೈಟ್‌ಳನ್ನು ಕೇಳಿದರೆ ಅವಳು ಹೇಳುತ್ತಾಳೆ: 'ಹೌದು ಅದು ತೆರಬೇಕಾಗಿದ್ದ ಬೆಲೆ '

ಜಗತ್ತು ತನ್ನ ಆತ್ಮ ಕಳೆದುಕೊಂಡಿದೆಯಾ ?

ನಮಗೆ ಗೊತ್ತು ಈ ಬೆಲೆ ತೆರಬೇಕಾದವರು ನಮ್ಮ ಮಕ್ಕಳ ಮಕ್ಕಳು. ಮುಂದೊಂದು ದಿನ ನಿಮ್ಮ ಮಕ್ಕಳ ಮಕ್ಕಳು, ನಮ್ಮ ಮಕ್ಕಳ ಮಕ್ಕಳಿಗೆ ಏನು ಹೇಳುತ್ತಾರೆ ?

ಚರಿತ್ರೆಯನ್ನ ಅಧಿಕಾರಸ್ತರು ಮತ್ತು ಭಾಗ್ಯವಂತರೇ ಬರೆಯುತ್ತಾ ಇರುತ್ತಾರೋ ಅಥವಾ ಜಗತ್ತಿನಾದ್ಯಂತ ಮನಸಾಕ್ಷಿ ಉಳ್ಳ ಮಿಲಿಯಗಟ್ಟಳೆ ಜನರ ದೃಷ್ಟಿ ದರ್ಶನಗಳು ಕೇಳಿಸುತ್ತವೋ? ಬಸ್ರಾ, ಬಾಗ್ದಾದ್ ನಗರಗಳ ಕತೆಗಳನ್ನ ಹೇಳಲಾಗುತ್ತದೋ ? ಸತ್ತ ಉಮಾಖಾಸರ್, ನಜಾರಿಯಾ ಮಾತನಾಡುತ್ತಾರೋ? ಕಣ್ಮರೆಯಾದವರು ಮತ್ತೆ ಸಿಗುತ್ತಾರೋ? ಶಾಂತಿಯ ತರ್ಕ, ಯುದ್ಧ ತರ್ಕವನ್ನು ಮೀರುತ್ತದೋ? ಅಥವಾ ಜಗತ್ತಿನ ಶಾಂತಿ ಎಂಬುದು ದೂರದ ಕನಸಾಗೇ ಉಳಿದುಬಿಡುತ್ತದೋ ?

ಮಿಸ್ಟರ್ ಕೋಫಿ ಅನಾನ್ ನೀವು ಮತ್ತು ವಿಶ್ವಸಂಸ್ಥೆ ಕೇಳಬೇಕು :

ಯಾಕೆ ಬಹಳಷ್ಟು ಸರ್ಕಾರಗಳು, ಜಗತ್ತಿನ ಮೂಲೆ ಮೂಲೆಗಳ ಮಿಲಿಯಗಟ್ಟಳೆ ಜನ ಮಿಲಿಟರಿ ಹಸ್ತಕ್ಷೇಪ ಮತ್ತು ಯುದ್ಧದ ವಿರುದ್ಧ ಅಚಲವಾಗಿ ನಿಂತಾಗ ಒತ್ತುವರಿ, ವಿಸ್ತರಣೆ ಮತ್ತು ಸಾಮ್ರಾಜ್ಯ ದಾಹಗಳಿಂದ ತಹತಹಿಸುತ್ತಿರುವ ಅಮೇರಿಕ, ಬ್ರಿಟನ್ ಮತ್ತಿತರೆ ಯುದ್ದದಾಹಿ ಸರ್ಕಾರಗಳನ್ನ ತಾವು ತಡೆಯಲಾಗಲಿಲ್ಲ.

ದಿಗಿಲಿಂದ, ದುಃಖದಿಂದ ಸಮಸ್ತ ಜಗತ್ತು ಗಮನಿಸುತ್ತಿರುವಾಗ ಭಯಾನಕ ಸಂಕಟದ ಯುದ್ಧ ಅನಾವರಣಗೊಳ್ಳುತ್ತಿದೆ

ಈ ಕ್ಷಣ ಕೂಡ ವಿಶ್ವಸಂಸ್ಥೆ ಸಾಮಾನ್ಯ ಸಭೆ ಶಾಂತಿಗಾಗಿ ಒಂದಾಗುವ ನಿರ್ಣಯ (ವಿಶ್ವಸಂಸ್ಥೆ ನಿರ್ಣಯ 377)ವನ್ನ ಜೀವಂತಗೊಳಿಸಬಹುದು. ಹಾಗೆ ಮಾಡಲು ಭದ್ರತಾ ಮಂಡಳಿ ಒಪ್ಪಿಕೊಳ್ಳದಿರುವಾಗ ಕೂಡ, ಶಾಂತಿಯನ್ನ ರಕ್ಷಿಸಿಕೊಳ್ಳಲು ಇದು ಸಾಮಾನ್ಯ ಸಭೆಗೆ ಅಧಿಕಾರ ಕೊಡುತ್ತದೆ. ನಿಮಗೆ ಗೊತ್ತು 1950 ರಿಂದೀಚೆಗೆ ಇದನ್ನ ಅನೇಕ ಸಲ ಜೀವಂತಗೊಳಿಸಲಾಗಿದೆ.

ಆದರೆ ಈ ಸಲ ತಾವು ಮೌನವಾಗಿದ್ದೀರಿ 'ತುಂಬಾ ಮುಖ್ಯ ಸಂಗತಿಗಳ ಬಗ್ಗೆ ನಾವು ಮೌನವಾಗುಳಿದ ದಿನ ನಾವು ಬದುಕಿದ್ದು ಸತ್ತಂತೆ 'ಅಂತಾ ಕಿರಿಯ ಮಾರ್ಟಿನ್ ಲೂಥರ್‌ಕಿಂಗ್ ಹೇಳಿದ ಮಾತು ನೆನಪಾಗುತ್ತಿದೆ.

ಇರಾಕ್ ಮೇಲಿನ ಯುದ್ಧ ತುಂಬಾ ಮುಖ್ಯ ಸಂಗತಿ. ಇರಾಕ್‌ನಲ್ಲಿ ಸಾಯುತ್ತಿರುವ ಮಕ್ಕಳು ತುಂಬಾ ಮುಖ್ಯ ವಿಚಾರ. ಅಲ್ಲಿ ಸಾಯುತ್ತಿರುವ ಒಮರ್, ಬಸೀಮ್, ಯಾಸ್ಮಿನ್ ಎಲ್ಲರೂ ಮುಖ್ಯ, ಪುರಾತನ ನಾಗರೀಕತೆ, ಅದರ ಅರಿವು ತುಂಬಾ ಮುಖ್ಯ, ಯುದ್ಧ ತಾನು ತರಬೇಕೆಂದಿರುವ ಸಂಕಟವನ್ನು ತಂದೇ ತರುತ್ತದೆ; ಇದು ಮುಖ್ಯ ವಿಚಾರ.

'ನಮಗೆ ಸಿಗುವುದು ಈಗಿನ ಈ ಕ್ಷಣ ಮಾತ್ರ,' ಥಿಚ್‌ನಾಟ್ ಹನ್ಹ ಹೇಳುವಂತೆ : ಮುಂದಿನ ಎಲ್ಲ ಕ್ಷಣಗಳಿಗೆ ಇದೊಂದೇ ಬಾಗಿಲು

ಮಿಸ್ಟರ್ ಅನ್ನಾನ್, ಶಾಂತಿಗೆ ಯಾವ ದಾರಿಗಳೂ ಇಲ್ಲ ಗಾಂಧೀಜಿ ಹೇಳಿದ್ದರು: ಶಾಂತಿಯೇ ದಾರಿ. ಈ ಘನ ಅರಿವುಗಳು ಯುದ್ಧದ ಬದಲು ನಮಗೆ ಬೇರೆ ದಾರಿ ತೋರುವಂತಾಗಬೇಕು

ನಾವು ಬದುಕುತ್ತಿರುವುದು ಪಾಳು ಬೀಳುತ್ತಿರುವ ಹತಾಷ ಕಾಲದಲ್ಲಿ: ಕಲ್ಪಿಸಿಕೊಳ್ಳಲು ಕೂಡ ಸಾಧ್ಯವಾಗದ ನಮ್ಮ ಕಾಲದ ಅನಾಹುತಗಳು ಮಹತ್ತರ ಅರಿವನ್ನ ಕಂಡುಕೊಳ್ಳಲು ನೆರವಾಗಬೇಕು.

ಈ ಕ್ಷಣ ಕೂಡ ಇರಾಕಿನಲ್ಲಿ ನಡೆಯುತ್ತಿರುವ ಯುದ್ಧ ನಿಲ್ಲಿಸುವಿರಾದರೆ ತಾವು ಹೊಚ್ಚ ಹೊಸದಾರಿ ತೋರಿದಂತಾಗುತ್ತದೆ. ಮಿಲಿಯಗಟ್ಟಳೆ ಜನ ನಿಮ್ಮೊಂದಿಗೆ ನಿಲ್ಲುತ್ತಾರೆ. ಮೌನವಾಗಿ ಇದ್ದು ಬಿಡುವಿರಾದರೆ ಮೌನದಿಂದ ಚರಿತ್ರೆಗೆ ಹೊಸ ಯುದ್ಧ ಅಪರಾಧಗಳನ್ನು ಸೇರಿಸುತ್ತಿರುವಿರಾದರೆ ನಿಮ್ಮ ಕ್ರಿಯೆ ಮತ್ತು ಮೌನದಿಂದ, ಈ ಪಾತಕದಲ್ಲಿ ನಿಮ್ಮದೂ ಪಾಲಿದೆ ಎಂದು ತಿಳಿಯುತ್ತಾರೆ.

ಇರಾಕಿನ ಮಕ್ಕಳ ದೃಷ್ಟಿಗಳನ್ನು ಎದುರಿಸುತ್ತೀರಾ? ಯಾವ ಕಥೆ ಹೇಳುತ್ತೀರಿ ಅವರಿಗೆ

ಒಂದಾನೊಂದು ಕಾಲದಲ್ಲಿ ಬಹಳ ಹಿಂದೇನೂ ಅಲ್ಲ

(ನಾವು ಆಘಾತಕಾರಿ ವರ್ತಮಾನದಲ್ಲಿ ಸಿಕ್ಕಿಕೊಂಡಿರುವಾಗ ತಾವಾಗಲೇ ಭವಿಷ್ಯತ್ತಿನ ಬಗ್ಗೆ ಮಾತನಾಡಲು ಶುರುಮಾಡಿಕೊಂಡಿದ್ದೀರಿ)

ಸಹಸ್ರಾರು ಇರಾಕಿಗಳ ನರಮೇಧ ಮಾಡಿದ ದಿವಸ ಮುಖ ತಿರುಗಿಸಿಕೊಂಡಿರಿ ತಾವು; ಇದು ಕರುಣಾಜನಕ, ಸಂದೇಹವಿಲ್ಲ. ಆದರೆ ನೀವು ಯುದ್ಧದಾಹಿಗಳು ಸೃಷ್ಟಿಸಿಕೊಂಡ ಭವಿಷ್ಯತ್ತನ್ನ ನೋಡುತ್ತಿದ್ದಿರಿ. ಕಟಬಾಯಿಗಳಿಂದ ಸೀಳು ನಾಲಿಗೆಗಳು ಒದರುವ ತುಂಡು ತುಂಡು ವಾಕ್ಯಗಳನ್ನ ಕೇಳಿಸಿಕೊಳ್ಳುತ್ತಿದ್ದಿರಿ ಅವರ ರಾಜಕೀಯ ದೊಂಗರಲಾಗಕ್ಕೆ ಮೌಲ್ಯ ಕಟ್ಟುತ್ತಾ ಕುಂತಿದ್ದಿರಿ.

ಮಿಸ್ಟರ್ ಅನ್ನಾನ್

ನರಮೇಧ ಅವರ ನಾಟಕದ ಸ್ಕಿಟ್ಟು ವಿಶ್ವಸಂಸ್ಥೆ ಮತ್ತು ನಿಮ್ಮನ್ನು ಅಪ್ರಸ್ತುತರನ್ನಾಗಿ ಮಾಡಿರುವಾಗಲೂ, ಸಾಮ್ರಾಜ್ಯ ವಿಸ್ತರಣೆ ಅವರ ಅಂತಿಮ ಉದ್ದೇಶ. ಇರಾಕಿನ ಮಕ್ಕಳೆದುರು ನಿಂತು 'ನನ್ನಲ್ಲಿ ಉತ್ತರಗಳಿಲ್ಲ' ಅಂತಾ ಹೇಳುತ್ತೀರಾ ? ಒಪ್ಪಿಕೊಂಡಿದ್ದೆಲ್ಲವೂ ಹಿಂಸಾತ್ಮಕ ಅಂತಾ ಹೇಳುತ್ತೀರಾ ? ಏನು ಹೇಳುತ್ತೀರಿ ಆ ಮಕ್ಕಳಿಗೆ ?

ಬೇರೆ ಕತೆಗಳನ್ನ ಕೇಳಬೇಕು ನೀವು : ಅರಬ್ ಭೂಮಿಯ ಬೀದಿ, ಮೂಲೆಗಳಿಂದ ಕೇಳಿ ಬರುವ ಕತೆಗಳು ಇರಾಕಿ ಮಹಿಳೆಯರು ಕತೆಗಳನ್ನು ಕೇಳಬೇಕು. ಜಗತ್ತಿನೆಲ್ಲ ಪ್ರದೇಶಗಳ ಮನಸಾಕ್ಷಿಗಳಿಂದ ಬರುವ ಕತೆಗಳು ಧೈರ್ಯ ಧೀಮಂತಿಕೆಯ ಕತೆಗಳು. ಸಾಮರಸ್ಯ ಮತ್ತು ಭರವಸೆಯ ಕತೆಗಳು, ಜನರ ಘನತೆ ಗೌರವದ ಕತೆಗಳು. ನಾಗರೀಕವೋ, ಅನಾಗರೀಕವೋ, ಯುದ್ಧಗಳ ಕಿರುಕುಳ, ಭಯೋತ್ಪಾದನೆ ಮತ್ತು ಸಂಕಟದ, ಮಕ್ಕಳ ಮನೋಲೋಕದ ಕತೆಗಳು. ಕಣ್ಣೀರಿಟ್ಟ ಮಕ್ಕಳು, ಮಾರುತದ ಮಕ್ಕಳು, ಚಂಡಮಾರುತದ ಮಕ್ಕಳು, ನಕ್ಷತ್ರಗಳ ಮಕ್ಕಳು - ಅವರಿಂದ ಒಂದು ಭರವಸೆ ; ಅವರು ಮಾತನಾಡುತ್ತಿರುವ ನ್ಯಾಯತತ್ಪರತೆ ದುರಾಸೆ, ಹಿಂಸೆ ಮತ್ತು ಯುದ್ಧ ಶಾಸನಗಳನ್ನ ತಡೆಗಟ್ಟುವ ನ್ಯಾಯ

ಇದೇ ತಾನೇ ಈ ಯುದ್ಧ.

ನ್ಯಾಯ ಮಾತ್ರ ತಡೆಯಬಲ್ಲುದು ಮಿಸ್ಟರ್ ಅನ್ನಾನ್ ಈ ಶಾಪಗಳನ್ನು

**ಕಾರಿನ್ ಕುಮಾರ್**

**ಇಂಟರ್‌ನ್ಯಾಷನಲ್ ವುಮೆನ್ಸ್ ಸಾಲಿಡಾರಿಟಿ, ಇರಾಕ್**

8 ಮಾರ್ಚ್ ಮತ್ತು 19 ಮಾರ್ಚ್ 2003

ವಿವಿಧ ದೇಶಗಳ ಮಹಿಳಾ ಪ್ರತಿನಿಧಿಗಳು 2003 ಮಾರ್ಚ್ 3 ರಿಂದ 12ರ ತನಕ ಇರಾಕಿನಲ್ಲಿ ಪ್ರಯಾಣ ಬೆಳೆಸಿದರು. ಈ ಪತ್ರದ ಒಕ್ಕಣೆ ಪ್ರಾರಂಭಿಸಿದ್ದು ಮಾರ್ಚ್ 8 ರಂದು ಬಾಗ್ದಾದ್ ನಗರದಲ್ಲಿ. ಮರಳಿ ಬರುವಾಗ ಪತ್ರದ ಒಕ್ಕಣೆ ಮುಂದುವರೆಯಿತು ; ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿ ಕೋಫಿ ಅನ್ನಾನ್ ಶಸ್ತ್ರಾಸ್ತ್ರ ಪರಿವೀಕ್ಷಕರನ್ನು ಇರಾಕಿನಿಂದ

ಹಿಂದಕ್ಕೆ ಕರೆಸಿಕೊಳ್ಳುವ ನಿರ್ಧಾರ ಮಾಡುವ ಮೂಲಕ ಇರಾಕ್ ಮೇಲಿನ ಅಮೇರಿಕ ಆಕ್ರಮಣಕ್ಕೆ ಅಂಗೀಕಾರ ಕೊಟ್ಟಾಗ ಕೊನೆಯ ಸಾಲುಗಳನ್ನು ಬರೆಯಲಾಯಿತು.

**ಇರಾಕ್ ಕುರಿತ ಅಂತರ್ರಾಷ್ಟ್ರೀಯ ಮಹಿಳಾ ಐಕ್ಯರಂಗ**

(ಸಮೀರಾ ಕೌರಿ, ಪ್ಯಾಲೆಸ್ಟೈನ್/ಲೆಬನಾನ್ ; ಇಕ್ಬಾಲ್ ಡೌಹಾನ್, ಲೆಬನಾನ್ ; ಫರೀದಾ ಅಕ್ತರ್, ಬಾಂಗ್ಲಾದೇಶ ; ಪ್ರೆಗ್ಸ್ ಗೋವೇಂದರ್, ದಕ್ಷಿಣ ಆಫ್ರಿಕ ; ಮಾರ್ಥಾ ಮಂಡೀ, ಬ್ರಿಟನ್ ; ನೆಲಿಯಾ ಸ್ಯಾಂಚೊ, ಫಿಲಿಫೈನ್ಸ್;ಲಿಲ್ಲಿ ಮೋರ್ ಎರಿಕ್‌ಸನ್, ಸ್ವೀಡನ್ : ಲೂಯಿಸಾ ಮೊರ್ಗಾಂಟಿನಿ, ಇಟಲಿ; ಫಾತಿಮಾ ಮೀರ್, ದಕ್ಷಿಣ ಆಫ್ರಿಕ ; ವಿಲ್ಮಾ ಎಸ್ಪಿನ್, ಕ್ಯೂಬಾ; ಬಿಲ್ಜಾನಾಕಾಸಿಕ್, ಕ್ರೋಪಿಯಾ; ಜನಿವೀವ್ ವಾಹಾನ್, ಅಮೇರಿಕ ; ಮಹ್ನಾಜ್ ಅಫ್ಕಾಮಿ, ಇರಾನ್ / ಅಮೇರಿಕ ; ಯೂನಿಸ್ ಸಂಟಾನ, ಪೋರ್ಟೋರಿಕೊ ; ನೀಲಮ್ ಹುಸೇನ್, ಪಾಕಿಸ್ತಾನ ; ವಾಂಗ್ ಜಿಯಾಕಿಯಾಂಗ್, ಚೀನಾ ; ಐಲೀನ್ ಪಿಟ್ ಅವೇ, ಆಸ್ಟ್ರೇಲಿಯಾ; ಹಮೀದಾ ಜೆಕೀರ್, ಟ್ಯುನೀಸಿಯಾ; ಸಿರಿಪೋನ್ ಸ್ಕ್ರೊಬಾನೆಕ್, ಥಾಯ್ಲೆಂಡ್ ; ಮಾರ್ಗ್ರೆರಿಟ್ ವಾಲರ್, ಅಮೇರಿಕ ; ಅಂಜೆಲಾ ಡೊಲ್ಮೆಪ್, ಕೊಲಂಬಿಯಾ ; ಮಧುಭೂಷಣ್, ಭಾರತ; ಮಿಲಿಲಾನಿತ್ರಾಸ್ಕ್, ಹವಾಯಿ/ಅಮೇರಿಕ; ಅರುಣಾ ಜ್ಞಾನದಾಸನ್, ಭಾರತ/ ಸ್ವಿಟ್ಜರ್‌ಲ್ಯಾಂಡ್ ; ವಾನೆಸಾ ಲೂಧ್ವಿಗ್, ದಕ್ಷಿಣ ಆಫ್ರಿಕಾ; ಇಟಾ ನದಿಯಾ, ಇಂಡೋನೇಷಿಯಾ; ರಬಿಯಾ ಅಬ್ದೆಲ್‌ಕ್ರಿಮ್, ಆಲ್ಜೀರಿಯಾ/ಸೆನೆಗಲ್; ಪ್ರಿಯಾ ಚಟರ್ಜಿ, ಭಾರತ/ಅಮೇರಿಕ; ಸುರಾ ಗಸ್ಸಾನ್, ಇರಾಕ್/ಟ್ಯೂನೀಸಿಯಾ; ಸಿಲ್ವಿಯಾ ಮಾರ್ಕೋಸ್, ಮೆಕ್ಸಿಕೊ; ಮೋಮಾ ವಿಯೇಜಾ, ಬ್ರೆಜಿಲ್; ರೋಜಾಲಿ ಬರ್ಟೆಲ್, ಕೆನಡಾ; ಕಾರಿನ್‌ಕುಮಾರ್, ಭಾರತ/ಟ್ಯೂನೀಸಿಯಾ.)

# ನಾಲ್ಕು ಹನಿಗಳು

೧) ಬೀಜದಲ್ಲಿ ಶಕ್ತಿಯಿದ್ದರೆ
ಮೊಡಕೆಯೊಡೆಯ ಬಹುದು
ಎಂದಾದರೂ,
ನೀರಪಸೆ ಲಭಿಸಿದಾಗ
ಸೂರ್ಯರಶ್ಮಿ ತಟ್ಟಿದಾಗ
ಅದು
ಕೇವಲ ಕಾಲದ ಪ್ರಶ್ನೆ

೨) ತೊರೆದವರೊಡನೆ
ಮತ್ತೆ ಬೆರೆಯುವುದೆಂದರೆ,
ಅನ್ಯಲೋಕದವರೊಡನೆ
ಸಂಬಂಧಕ್ಕೆಳಸಿದಂತೆ.

ಸದಾಕಾಲ ಸುಖಾಸುಮ್ಮನೆ
ಕಚ್ಚುವವರು ಅವರು
ಸರ್ವಶ್ರೇಷ್ಠರಂತೆ.

೩) ವಿಧಿಯಿಲ್ಲದೆ ಒಮ್ಮೊಮ್ಮೆ
ಬುಸ್ಸೆನ್ನುವ ನನ್ನ ನಿಲುವು
ಸರಿಯಿಲ್ಲವಂತೆ
ಆಹಾ!

೪) ಸೂರ್ಯ ಸಾಮೀಪ್ಯದ ಅರ್ಥ
ಕತ್ತಲ ಸರ್ವನಾಶ
ಬೆಳಕೋ ಬೆಳಕು

ಹಣತೆಯ ಮಹಿಮೆಯೇ ಬೇರೆ,
ಬೇಕೆಂಬಷ್ಟೇ ಬೆಳಕು
ಮಿಕ್ಕಂತೆ
ಕತ್ತಲೊಡನೆ ಸಹಬಾಳ್ವೆ.

**ಡಾ. ಎಚ್. ಎಸ್. ಸುಜಾತ.**

# ವಿವಾಹಬಾಹಿರ ಸಂಬಂಧಗಳಲ್ಲಿ ಲಿಂಗ ಸಮಾನತೆಯ ಪ್ರಶ್ನೆ : ಪಾತರದವರನ್ನು ಜೋಗತಿಯರನ್ನು ಅನುಲಕ್ಷಿಸಿ

ಡಾ.ಶೈಲಜಾ ಹಿರೇಮಠ

ಇತ್ತೀಚಿನ ದಿನಗಳಲ್ಲಿ ಲಿಂಗಸಂಬಂಧಿ ಚರ್ಚೆಗಳು ಬಹುವಾಗಿ ಕೇಳಿ ಬರುತ್ತಿವೆ. ಜಾತಿ, ಧರ್ಮ, ದುಡಿಮೆ, ಉದ್ಯೋಗ, ಸಂಸ್ಕೃತಿ, ಸಮಾಜ, ರಾಜಕೀಯ ಈ ಮೊದಲಾದ ವಿಷಯಗಳಲ್ಲಿ ಲಿಂಗಸಂಬಂಧಿ ನೆಲೆಗಳನ್ನು ಹಾಗೂ ತಾರತಮ್ಯಕ್ಕೆ ಕಾರಣವಾದ ಸಂಗತಿಗಳನ್ನು ತೀವ್ರವಾದ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಕೆಳವರ್ಗದ ಮಹಿಳೆಯ ಕುರಿತಂತೆ ಗಂಭೀರವಾದ ಅಧ್ಯಯನಗಳು ಅಷ್ಟಾಗಿ ನಡೆದಿಲ್ಲ. ವಿವಾಹಬಾಹಿರ ಸಂಬಂಧಗಳಲ್ಲಿ ಲಿಂಗಸಮಾನತೆ ಇದೆಯೇ ಎನ್ನುವ ಹುಡುಕಾಟದ ಪ್ರಯತ್ನ ನಮ್ಮಲ್ಲಿ ನಡದೇ ಇಲ್ಲ. ಹೀಗಾಗಿ ಈ ಬಗೆಯ ಅಧ್ಯಯನದ ಅಗತ್ಯವಿದೆ. ನಮ್ಮ ಅಧ್ಯಯನಗಳು ಅಲಕ್ಷಿತ ಮಹಿಳಾ ಸಮುದಾಯಗಳ ಕಡೆಗೆ ಅದರಲ್ಲೂ ಅವರ ಖಾಸಗಿ ಬದುಕಿನ ಈ ಬಗೆಯ ವಿವರಗಳ ಕಡೆಗೆ ಸಾಗಬೇಕಿದೆ. ಕಾರಣ 'ಖಾಸಗಿ ' ಎನ್ನುವ ಹೆಸರಿನಲ್ಲಿ ಇಂತಹ ಸಂಗತಿಗಳನ್ನು ಕೈಬಿಟ್ಟರೆ, ಅವರ ಕನಸುಗಳನ್ನು ಕೊಯ್ಯುವ, ಅವರ ಭಾವನೆಗಳನ್ನಾಳುವ ವಿಷಯುಗಳನ್ನು ಪೋಷಿಸಿ -ದಂತಾಗುತ್ತದೆ. ಅವರ 'ಖಾಸಗಿ ' ವಿವರಗಳಲ್ಲಿ ಸಮಾಜಕ್ಕೆ ಮಾದರಿಯಾಗುವ ವಿಷಯಗಳಿದ್ದರೆ, ಅದರಿಂದ ಇಡೀ ಜಗತ್ತೆ ವಂಚಿತವಾಗುತ್ತದೆ.

ವಿವಾಹ ಸಂಸ್ಥೆ ಲಿಂಗತಾರತಮ್ಯವನ್ನು ಪೋಷಿಸುತ್ತದೆ ಎಂಬುದನ್ನು ಈಗಾಗಲೇ ನಡೆದ ಅಧ್ಯಯನಗಳು ಸಾಬೀತು ಮಾಡಿವೆ. ವಿವಾಹ ವ್ಯವಸ್ಥೆಯೇತರ ಸಂಬಂಧಗಳಲ್ಲಿ ಲಿಂಗ ಸಮಾನತೆಯ ಹುಡುಕಾಟ ನಡೆಯಬೇಕಿದೆ. ಇಟ್ಟುಕೊಂಡವಳು ಗಂಡಸಿನ ಸಂಪತ್ತು, ಯೌವನ, ಆರೋಗ್ಯ ಇರುವವರೆಗೆ ಮಾತ್ರ ಆತನಿಗೆ ವಿಧೇಯಳಾಗಿ, ನಿಷ್ಠಳಾಗಿ ನಡೆದುಕೊಳ್ಳುವಳು. ಹಣದ ದುರಾಶೆಯ ಜೊತೆಗೆ ತೀವ್ರವಾದ ಲೈಂಗಿಕ ಅತೃಪ್ತಿ ಅವಳನ್ನು ಕಾಡುತ್ತಿರುತ್ತದೆ. ಲೈಂಗಿಕ ಲಾಲಸೆ ಅವಳಿಗೆ ರಕ್ತಗತವಾಗಿಯೇ ಬಂದಿದೆ. ಹೀಗಾಗಿ ಸಂಪತ್ತು, ಯೌವನ, ಆರೋಗ್ಯ ಈ ಮೂರು ಸಂಗತಿಗಳಲ್ಲಿ ಯಾವುದಾದರೊಂದನ್ನು ಕಳೆದುಕೊಂಡರೆ ಅವನೊಂದಿಗಿನ ಸಂಬಂಧವನ್ನು ಸಡಿಲಗೊಳಿಸಿಕೊಳ್ಳುತ್ತಾಳೆ. ಹಣವೊಂದಿದ್ದರೆ ಅವನ ಆರೋಗ್ಯ, ಯೌವನವನ್ನು ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ. ದುಡ್ಡು, ಬೆಳ್ಳಿ, ಬಂಗಾರ, ಭೂಮಿ ಇವುಗಳನ್ನು ಕಳೆದುಕೊಂಡರೆ ಇಟ್ಟುಕೊಂಡವನನ್ನು ಸಂಪೂರ್ಣವಾಗಿ ತ್ಯಜಿಸಿ ಬಿಡುತ್ತಾಳೆ. ಹೀಗೆ ಕಾಮುಕಿಯನ್ನಾಗಿ, ದುರಾಸೆಯವಳನ್ನಾಗಿ, ಕುಟಿಲೆಯನ್ನಾಗಿ ಚಿತ್ರಿಸುವ ನಮ್ಮ ಸಮಾಜವು ಈ ಮಾನದಂಡಗಳಿಂದಲೇ ಅವಳನ್ನು ಕತ್ತಲಲ್ಲಿರಿಸಿದೆ. ಹಾಗೂ ಸಾಮಾಜಿಕ ಅಪರಾಧಿಯನ್ನಾಗಿಸಿದೆ. 'ಹೆಂಡತಿ 'ಯ ಕುರಿತು ಬೇರೆಯದೇ ಆದ ಪರಿಕಲ್ಪನೆಗಳಿವೆ. ಪತ್ನಿಯಾದವಳು ಕಾಯಾ, ವಾಚಾ, ಮನಸಾ ಗಂಡನಿಗೆ ನಿಷ್ಠಳಾಗಿರಬೇಕಾಗುತ್ತದೆ. ಹಾಗಿರುವುದನ್ನೇ ನಮ್ಮ ಸಮಾಜ ಸ್ತ್ರೀಧರ್ಮವೆಂದು ಕರೆದಿದೆ. ಇಟ್ಟುಕೊಂಡವಳ ಹಾಗೂ ಕಟ್ಟಿಕೊಂಡವಳ ಕುರಿತಂತಿರುವ ಸಮಾಜದ ಈ ಗ್ರಹಿಕೆ ಅವರಿಗೆ ಶ್ರೇಷ್ಠ, ಕನಿಷ್ಠತೆಯ ಸ್ಥಾನವನ್ನು ನಿರ್ಧರಿಸಿಬಿಟ್ಟಿರುತ್ತದೆ. ಇದರ ಪ್ರತಿಫಲನವನ್ನು 'ಇಟ್ಟುಕೊಂಡವಳು ಇರುವತನಕ, ಕಟ್ಟಿಕೊಂಡವಳು ಕೊನೆಯತನಕ 'ಎನ್ನುವ ಗಾದೆಮಾತಿನಲ್ಲಿ ಕಾಣಬಹುದು. ಆದರೂ ಅವರ ಖಾಸಗಿ ಬದುಕಿನ ವಿವರಗಳು ಈ ಮಾತಿಗೆ ತದ್ವಿರುದ್ಧವಾದ ಬೇರೆಯದೇ ಜಗತ್ತನ್ನು ತೆರೆದಿಡಬಹುದಲ್ಲ ಎನ್ನುವ ಕುತೂಹಲವೇ ಈ ಲೇಖನಕ್ಕೆ ಸ್ಫೂರ್ತಿಯಾಗಿದೆ. ಈ ಅಧ್ಯಯನದಲ್ಲಿ ಜೋಗತಿ ಮತ್ತು ಪಾತರದವರನ್ನು ಮಾತ್ರ ಅನುಲಕ್ಷಿಸಿರುವೆ. ಬಸವಿಯರನ್ನು, ಸೂಳೆಯರನ್ನು ಉದ್ದೇಶ ಪೂರ್ವಕವಾಗಿಯೇ ಕೈಬಿಟ್ಟಿರುವೆ. ಮದುವೆಯಾಗದೆ ಗಂಡು, ಹೆಣ್ಣು ಸಂಬಂಧ ಬೆಳೆಸಲು ಸಮಾಜ ಒಪ್ಪಿಗೆ ನೀಡಿದ ಸಂಸ್ಥೆಗಳೆಂದರೆ ಜೋಗತಿಯರು, ಪಾತರದವರು, ಬಸವಿಯರು, ಸೂಳೆಯರು. ಪಾತರ ಜನಾಂಗ ಮೂಲದಲ್ಲಿ ಮಾತೃ ಪ್ರಧಾನವಾಗಿತ್ತು. 'ಜೋಗತಿ'ಯರಲ್ಲಿ ಪ್ರಚಲಿತವಿರುವ ಅನೇಕ ಸಂಪ್ರದಾಯ, ಆಚರಣೆಗಳಲ್ಲಿ ಮಾತೃಪ್ರಧಾನ ಮೌಲ್ಯಗಳೂ ಇಂದಿಗೂ ಉಳಿದುಕೊಂಡು ಬಂದಿವೆ. ಆದರೆ ವಾಸ್ತವದಲ್ಲಿ ಅದು ಪ್ರಧಾನ ಸಮಾಜದ ಉದ್ದೇಶಗಳ ಜೊತೆಗೆ ಹೊಂದಿಕೊಂಡಿದೆ. ಬಸವಿಯರನ್ನು ಮತ್ತು ಸೂಳೆಯರನ್ನು ಪ್ರಧಾನ ಸಮಾಜವೇ ಹುಟ್ಟುಹಾಕಿ ಅಧಿಕೃತ ಸಂಸ್ಥೆಗಳನ್ನಾಗಿಸಿದೆ. ಇಲ್ಲಿ ಹೆಣ್ಣು ಕೇವಲ ಉಪಭೋಗದ ಪದಾರ್ಥ ವಸ್ತು. ಹೀಗಾಗಿ ಇವುಗಳಲ್ಲಿ ಲಿಂಗಸಮಾನತೆಯ ಹುಡುಕಾಟದ ಪ್ರಶ್ನೆಯೇ ಬರುವುದಿಲ್ಲ. ಆದ್ದರಿಂದಲೇ ಈ ಲೇಖನದಲ್ಲಿ ಮಾತೃಮೂಲ ಹಿನ್ನೆಲೆಯುಳ್ಳ ಜೋಗತಿಯರು ಮತ್ತು ಪಾತರದವರನ್ನು ಮಾತ್ರ ಕೇಂದ್ರವಾಗಿರಿಸಿಕೊಂಡಿದೆ. ಪಾತರದವರು ಎನ್ನುವ ಕೃತಿ ಪ್ರಕಟವಾಗಿದೆ. ಅದರಲ್ಲಿ ದಾಖಲುಗೊಳಿಸದೇ ಇರುವ ಮಾಹಿತಿಯನ್ನು ಈ ಲೇಖನದಲ್ಲಿ ಬಳಸಿಕೊಂಡಿರುವೆ. ಜೋಗತಿಯರ ಕುರಿತಂತೆ ಅಧ್ಯಯನ ನಡೆಸಿರುವೆ. ಕ್ಷೇತ್ರಕಾರ್ಯಾಧ್ಯಯನದಲ್ಲಿ ದೊರೆತ ಮಾಹಿತಿಗಳನ್ನು ಇಲ್ಲಿ ಬಳಸಿಕೊಂಡಿರುವೆ. ಹುನಗುಂದ, ಕಮಲಾಪುರ,

ಮರಿಯಮ್ಮನಹಳ್ಳಿ (ಹೊಸಪೇಟೆ), ಚಿಗಟೇರಿ, ಕೂಲಹಳ್ಳಿ (ಹರಪನಹಳ್ಳಿ), ಅಥಣಿ,ತೇರದಾಳ, ಸಂಕೇಶ್ವರ, ಲಕ್ಷ್ಮೇಶ್ವರ ಮೊದಲಾದ ಸ್ಥಳಗಳಲ್ಲಿ ಕ್ಷೇತ್ರಕಾರ್ಯ ನಡೆಸಿರುವೆ. ಕ್ಷೇತ್ರಕಾರ್ಯ ಪ್ರಧಾನವಾದ ಲೇಖನವಿದಾದರೂ ಅಗತ್ಯವೆನಿಸಿದಲ್ಲಿ ಅಲ್ಲಲ್ಲಿ ಪ್ರಕಟಿತ ಕೃತಿಗಳನ್ನು ಗಮನಿಸಿರುವೆ.

## ವಿವಾಹ : ಸ್ತ್ರೀ

ಪಾತಿವ್ರತ್ಯವನ್ನು ಕೇಂದ್ರವಾಗಿರಿಸಿಕೊಂಡು ವಿವಾಹ ಸಂಸ್ಥೆ ಹುಟ್ಟಿದರೆ, ಪುರುಷರ ಲೈಂಗಿಕ-ಸ್ವೇಚ್ಛಾಚಾರವನ್ನು ನೈತಿಕವಾಗಿಸುತ್ತ ಬಸವಿ, ಸೂಳೆಯಂತಹ ಸಂಸ್ಥೆಗಳು ಬೆಳೆದುಕೊಂಡು ಬಂದವು. ಈ ಹಂತದಲ್ಲಿಯೇ ಹೆಣ್ಣನ್ನು ಜೈವಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಕನಿಷ್ಠಗೊಳಿಸುತ್ತಾ ಪುರುಷ ತಾನು ಮಾತ್ರ ಶ್ರೇಷ್ಠನಾಗಿ ಬೆಳೆದು, ಉಳಿದುಕೊಂಡು ಬಂದನು. ವಿವಾಹ ಎಂಬ ಸಂಸ್ಥೆಯೇ ಹೆಣ್ಣಿನ ಪಾವಿತ್ರತೆ ಮತ್ತು ವಿಧೇಯತೆಯನ್ನು ನಿರೀಕ್ಷಿಸುತ್ತದೆ. ಗಂಡ ಹೆಂಡತಿಯರಲ್ಲಿ ಹೆಣ್ಣು ಗಂಡು ಎನ್ನುವ ನೈಸರ್ಗಿಕ ಭಿನ್ನತೆಯ ಜೊತೆಗೆ ಸಾಮಾಜಿಕ ಭಿನ್ನತೆಯೂ ಇದೆ.

ಮಾನವ ಶಾಸ್ತ್ರಜ್ಞರ ಪ್ರಕಾರ ವಿವಾಹ ಎನ್ನುವುದು ಹೆಣ್ಣು-ಗಂಡಿನ ನಡುವೆ ಏರ್ಪಡುವ ಲೈಂಗಿಕದ ಶಾಶ್ವತ ಸಂಬಂಧ, ಮಕ್ಕಳ ಸೃಷ್ಟಿ ಹಾಗೂ ಅವುಗಳ ಪೋಷಣೆಗಾಗಿ ಮಾಡಿಕೊಂಡಿರುವ ಒಪ್ಪಂದ. ಸಮಾಜ ಶಾಸ್ತ್ರಜ್ಞರ ಪ್ರಕಾರ ಶಾಶ್ವತ ಲೈಂಗಿಕ ಸಂಬಂಧದೊಂದಿಗೆ ಕುಟುಂಬವನ್ನು ಕಟ್ಟುವುದು, ಸಂತಾನ ಸೃಷ್ಟಿ ಹಾಗೂ ಅವುಗಳ ಪಾಲನೆ ಮಾಡುವುದಾಗಿದೆ. ಒಟ್ಟಿನಲ್ಲಿ ವಿವಾಹ ಎನ್ನುವುದು ಹೆಣ್ಣು-ಗಂಡಿನ ಸಂಬಂಧಕ್ಕೆ ಶಾಶ್ವತ ಸ್ವರೂಪವನ್ನು ನೀಡುತ್ತದೆ. ಅದಕ್ಕೆ ಕೌಟುಂಬಿಕ ರಚನೆಯನ್ನು ನೀಡಿ ವ್ಯಕ್ತಿಗಳನ್ನು ಅದರೊಳಗೆ ಬಂಧಿಸುತ್ತದೆ. ಇದರೊಳಗೆ ನಿಜಕ್ಕೂ ಬಂಧಿಯಾಗುವವಳು ಹೆಣ್ಣು ಮಾತ್ರ. ಹುಟ್ಟಿದ ಮಕ್ಕಳು ತನ್ನವೇ ಎಂದು ಗಂಡಸಿಗೆ ನಿಖರವಾಗಿ ಗುರುತಿಸಿಕೊಳ್ಳಲು ಮತ್ತು ಸಮಾಜಕ್ಕೆ ಅದನ್ನು ಸ್ಪಷ್ಟಪಡಿಸಲು ವೈವಾಹಿಕ ಸಂಸ್ಥೆಯ ಸ್ತ್ರೀಯಿಂದ ಲೈಂಗಿಕ ನಿಷ್ಠೆಯನ್ನು ಬಲವಾಗಿ ನಿರೀಕ್ಷಿಸುತ್ತದೆ. ಸಮಾಜಶಾಸ್ತ್ರಜ್ಞರು ಹಾಗೂ ಮಾನವ ಶಾಸ್ತ್ರಜ್ಞರಿಗಿಂತಲೂ ಭಿನ್ನವಾಗಿ ಸ್ತ್ರೀವಾದಿಗಳು ವಿವಾಹವನ್ನು ವ್ಯಾಖ್ಯಾನಿಸುತ್ತಾರೆ. ಇಂದಿರಾ ಅವರ ಪ್ರಕಾರ "ವಿವಾಹ ಎನ್ನುವ ಸಂಬಂಧ ಏರ್ಪಡುವುದರಿಂದ ಒಟ್ಟಿಗೆ ಇರುವ ವ್ಯಕ್ತಿಗಳೂ ಅವರವರ ವಯಸ್ಸು, ಲಿಂಗ ಮತ್ತು ಏರ್ಪಟ್ಟಿರುವ ಸಂಬಂಧದ ಸ್ವರೂಪದ ಆಧಾರದ ಮೇಲೆ ಅವರಿಗೆ ಬೇರೆ-ಬೇರೆಯಾದ ಪಾತ್ರಗಳನ್ನು ವಿವಾಹ ಎನ್ನುವ ಸಾಂಸ್ಥಿಕ ಚೌಕಟ್ಟಿನ ಒಳಗೆ ನಿರ್ವಹಿಸಬೇಕಾಗುತ್ತದೆ. ಈ ಪಾತ್ರ ಹಂಚಿಕೆ ಬಹುತೇಕ ಸಂದರ್ಭಗಳಲ್ಲಿ ಸ್ತ್ರೀ ಪುರುಷರ ನಡುವೆ ಈಗಾಗಲೇ ಇರುವಂಥ ಅಸಮಾನತೆಯನ್ನು ಮತ್ತೂ ಬಲಗೊಳಿಸುವುದರ ಜೊತೆಗೆ, ಸ್ತ್ರೀಯರಿಂದಲೇ ವಿಶೇಷವಾದಂಥ ನಡವಳಿಕೆಯನ್ನು ನಿರೀಕ್ಷಿಸುತ್ತದೆ. ವಿವಾಹದ ಅನೇಕ ಆಚರಣೆಗಳೂ ಕೂಡ ವಿವಾಹವಾಗಲಿರುವ ಸ್ತ್ರೀ ಮತ್ತು ಪುರುಷರ ಹಾಗೂ ಅವರ ಸಂಬಂಧಿಗಳನ್ನು ಪ್ರಧಾನ್ಯತೆ, ಪರಾಧೀನತೆಯ ವರ್ತುಲದಲ್ಲಿ ಸಿಲುಕಿ ಹಾಕಿಸುತ್ತವೆ. ಉದಾಹರಣೆ 'ಹೆಣ್ಣನ್ನು ಒಪ್ಪಿಸುವುದು', ಗಂಡಿಗೆ ಹೆಣ್ಣನ್ನು ಒಪ್ಪಿಸುವಾಗ ಆಕೆಯ ಮೇಲೆ ಆತನ, ತನ್ಮೂಲಕ ಆತನ ಇಡೀ ಕುಟುಂಬದ ಅಧಿಕಾರವನ್ನು ಸ್ಥಾಪಿಸುವಂತಹ ಒಂದು ವ್ಯವಸ್ಥೆಯನ್ನು ವಿವಾಹ ಸೃಷ್ಟಿಸುತ್ತದೆ. ವಿವಾಹ ಸಂಬಂಧ ಆಚರಣೆಗಳು ವಿವಾಹ ಎನ್ನುವ ಸಂಬಂಧಕ್ಕೆ ಸಾಮಾಜಿಕ ಮಾನ್ಯತೆಯನ್ನು ನೀಡುತ್ತವೆ. ಹಾಗೂ ಆ ಸಂಬಂಧವನ್ನು ಪ್ರವೇಶಿಸಿದವರಿಗೆ ತಮ್ಮ ತಮ್ಮ ಜವಾಬ್ದಾರಿಗಳ ಬಗ್ಗೆ ಅರಿವನ್ನು ಮೂಡಿಸುತ್ತವೆ ಎನ್ನುವುದು ನಿಜವಾದರೂ ಈ ಆಚರಣೆಗಳೇ ಅನೇಕ ಸಂದರ್ಭಗಳಲ್ಲಿ ಸ್ತ್ರೀ ಶೋಷಣೆಗೆ ಕಾರಣವಾಗುತ್ತವೆ ಎಂಬುದನ್ನು ವಿಶೇಷವಾಗಿ ಗಮನಿಸಬೇಕಾಗಿದೆ.[2] ಹೈದಿಹಾರ್ಟಮನ್‌ರು "ಮಹಿಳೆಯರ ಲೈಂಗಿಕತೆ, ಸಂತಾನೋತ್ಪತ್ತಿಯ ಸಾಮರ್ಥ್ಯ, ಆರ್ಥಿಕ ಸಂಪನ್ಮೂಲಗಳ ಮೇಲೆ ನಿಯಂತ್ರಣ ಹೊಂದುವ ಮೂಲಕ ಮಹಿಳೆಯರನ್ನು ನಿಯಂತ್ರಿಸಲಾಗುತ್ತದೆ. ಇದು ಏಕಸತಿ ವಿವಾಹ ಪದ್ಧತಿ, ಮಕ್ಕಳ ಪೋಷಣೆ ಮತ್ತು ಮನೆಗೆಲಸದ ಜವಾಬ್ದಾರಿ, ಪುರುಷರು, ರಾಜಕೀಯ ವ್ಯವಸ್ಥೆ, ಮತ್ತಿತರ ಸಂಘ ಸಂಸ್ಥೆಗಳ ಮೇಲಿನ ಆರ್ಥಿಕಾವಲಂಬನೆ ಮುಂತಾದವುಗಳಲ್ಲಿ ವ್ಯಕ್ತವಾಗುತ್ತದೆ ಎಂದು ಹೇಳಿದ್ದಾರೆ.[3] ವಿವಾಹ ಸಂಬಂಧ ಮಹಿಳೆಯರನ್ನು ಕೌಟುಂಬಿಕವಾಗಿ ಸಾಮಾಜಿಕವಾಗಿ, ಆರ್ಥಿಕವಾಗಿ ಸಾಂಸ್ಕೃತಿಕವಾಗಿ ದುರ್ಬಲಳನ್ನಾಗಿಸುತ್ತದೆ. ಮದುವೆಯ ಸಂದರ್ಭದಲ್ಲಿ ನಡೆಯುವ ಆಚರಣೆಗಳೂ ಗಂಡು ಶ್ರೇಷ್ಠ, ಹೆಣ್ಣು ಕನಿಷ್ಠಳು ಎನ್ನುವ ಶ್ರೇಣೀಕರಣವನ್ನು ಕಾಯ್ದುಕೊಂಡು ಬಂದಿರುತ್ತವೆ. ಹೆಂಡತಿಯಾದವಳು ಗಂಡನ ಹಾಗೂ ಆತನ ಕುಟುಂಬದ ಇತರ ಸದಸ್ಯರ ದೌರ್ಜನ್ಯವನ್ನು, ಹಿಂಸೆಯನ್ನು ಅನುಭವಿಸಬೇಕಾಗುತ್ತದೆ. ಕುಟುಂಬದೊಳಗೆ ನಡೆಯುವ ಈ ಬಗೆಯ ತಾರತಮ್ಯ ಹಾಗೂ ಹಿಂಸೆಗಳನ್ನು 'ಖಾಸಗಿ' ಎಂದು ಪರಿಗಣಿಸುವುದರಿಂದ ಮಹಿಳೆ ಅನಿವಾರ್ಯವಾಗಿ ಅವುಗಳೊಂದಿಗೆ ರಾಜಿ ಮಾಡಿಕೊಂಡು ಬದುಕಬೇಕಾಗುತ್ತದೆ.

## ವಿವಾಹಬಾಹಿರ ಸಂಬಂಧಗಳು : ಲಿಂಗ ಸಮಾನತೆ ?

ವಿವಾಹಪೂರ್ವದ ಸಂಬಂಧಗಳು, ವಿವಾಹ ನಂತರದ ಸಂಬಂಧಗಳ ಕುರಿತಿರುವ ದಾಖಲಾತಿಗಳು ಜನಪದ ಗೀತೆಗಳಲ್ಲಿ ಹೇರಳವಾಗಿ ದೊರೆಯುತ್ತವೆ. ಇಂತಹ ಸಂಬಂಧಗಳನ್ನು ನಮ್ಮ ಪುರುಷ ಪ್ರಧಾನ ಸಮಾಜ 'ಹಾದರ' ವೆಂದು ಕರೆದು ಅದನ್ನು ಅನೈತಿಕ ಸಂಬಂಧವಾಗಿಸಿದೆ. ಈ ತೆರನಾದ ಸಂಬಂಧಗಳಲ್ಲಿ ಹೆಣ್ಣನ್ನು ಕೇಂದ್ರವಾಗಿರಿಸಿದಾಗ 'ಹಾದರ'ವೆನಿಸುತ್ತದೆ. ಗಂಡು ಕೇಂದ್ರವಾದಾಗ ಅದು ಪುರುಷತ್ವದ ಪ್ರತಿಷ್ಠೆಯಾಗಿ ಪ್ರತಿಬಿಂಬಿತವಾಗುತ್ತದೆ.

ಪಾತರದ ಮಹಿಳೆಯರು ಹಾಗೂ ಜೋಗತಿಯರು ಮತ್ತು ಅವರೊಡನೆ ಸಂಬಂಧವಿಟ್ಟುಕೊಂಡ ಪುರುಷರು, ಇವರಲ್ಲಿ ಲಿಂಗ ಸಮಾನತೆ ಇದೆಯೇ ಎನ್ನುವ ಕುತೂಹಲದ ಹುಟುಕಾಟ ನಡೆಸಿದೆ. ಕ್ಷೇತ್ರಕಾರ್ಯದಲ್ಲಿ ಅವರ ಖಾಸಗಿ ಬದುಕಿನ ಕುರಿತು ಮಾತನಾಡಿಸಲು ನಾನು ಪ್ರಯತ್ನಪಟ್ಟಾಗಲೆಲ್ಲಾ ಅವರು ನುಣುಚಿಕೊಳ್ಳಲು ಪ್ರಯತ್ನಿಸಿದ್ದೇ ಹೆಚ್ಚು. 'ತಮ್ಮ ಹೆಂಡ್ತಿಯ್ಹಂಗ ನನ್ನೂ ಚೆಂದಾಗಿ ನೋಡಿಕೊಂಡ್ರು' ಎಂದಷ್ಟೇ ಹೇಳಿ ಮೌನದ ಮೊರೆಹೋಗುತ್ತಿದ್ದರು. ಒಮ್ಮಿಂದೊಮ್ಮೆಲೆ ಮಂಕಾಗಿ ಬಿಡುತ್ತಿದ್ದರು. ಕತ್ತಲು ತುಂಬಿದ ಆ ಮೌನದಲ್ಲಿ ಬಚ್ಚಿಟ್ಟ ಅನೇಕ ಸಂಗತಿಗಳು ಮಿನುಗುತ್ತಿದ್ದವು. ಮದುವೆಯ ಬಂಧನಕ್ಕೆ ಒಳಪಟ್ಟ ಮಹಿಳೆಯರೇ ತಮ್ಮ 'ಖಾಸಗಿ' ಬದುಕಿನ ಕುರಿತಂತೇ ಹೇಳಲು ಮುಜುಗರಪಟ್ಟುಕೊಳ್ಳುತ್ತಾರೆ. ಹೇಳಿದರೂ ಗಂಡನ ವ್ಯಕ್ತಿತ್ವಕ್ಕೆ ಕುಂದುಬರದ ರೀತಿಯಲ್ಲಿ ನಯವಾಗಿ ಸುಳ್ಳು ಹೇಳುತ್ತಾರೆ. ಇಂಥ ಸಾಮಾಜಿಕ ಪರಿಸರದಲ್ಲಿ ಪಾತರದವರ, ಜೋಗತಿಯರ ಖಾಸಗಿ ಬದುಕಿನ ಬಗ್ಗೆ ನಿಖರವಾದ ಮಾಹಿತಿಯನ್ನು ಕಲೆಹಾಕುವುದು ಅಷ್ಟು ಸುಲಭವಲ್ಲ.

ಒಂದು ಬಾರಿ ಗಂಡಾ ಕಟ್ಟಿಸಿಕೊಂಡವರು[4], ಮುತ್ತು ಕಟ್ಟಿಸಿಕೊಂಡವರು ಮದುವೆಯಾಗುವಂತಿಲ್ಲ. ಆದರೆ ಮೇಲ್ವರ್ಗದ, ಮೇಲ್ಜಾತಿಯ ಪುರುಷನೊಬ್ಬನಿಗೆ ಅವರು ಮೀಸಲಾಗಿರಬೇಕು. ಇಂತಹ ಸಂಬಂಧಗಳು ಪುರುಷ ಪ್ರಧಾನ ಸಮಾಜದಲ್ಲಿ ಅನೈತಿಕವಾದವುಗಳಲ್ಲವಾದರೂ, ಇತ್ತೀಚಿಗೆ ಅವುಗಳನ್ನು ಗೌರವಿಸುತ್ತಿಲ್ಲ. ಹೀಗಾಗಿ ಪಾತರದವಳು, ಜೋಗತಿ ತಮ್ಮೊಂದಿಗೆ ಸಂಬಂಧವಿಟ್ಟುಕೊಂಡ ಗಂಡಸಿನ ಬಗ್ಗೆ ಸರಿಯಾಗಿ ಪ್ರತಿಕ್ರಿಯಿಸಲಿಲ್ಲ. ಇಟ್ಟುಕೊಂಡವನು ಸತ್ತಿದ್ದರೆ ಮಾತ್ರ ಅಂತವರ ಕುರಿತು ಹೆಚ್ಚಿನ ವಿವರಣೆಯನ್ನು ನೀಡಿದರು. ಜೋಗತಿಯರಿಗೆ, ಪಾತರದವರಿಗೆ ಒಂದು ಬಗೆಯ ಗೌರವವಿದ್ದ ಕಾಲದಲ್ಲಿ, ಅವರ ಸಂಬಂಧಗಳಲ್ಲಿ ಲಿಂಗಸಮಾನತೆಯ ಹುಡುಕಾಟ ನಡೆಸಿದ್ದರೆ ಬೇರೆ ಬಗೆಯ ಮಾಹಿತಿಗಳು ದೊರೆಯುತ್ತಿದ್ದವೇನೋ ! ಜೋಗತಿಯರೆಂದರೇ, ಪಾತರದವರೆಂದರೆ ಮೂಗು ಮುರಿಯುವ ಇವತ್ತಿನ ಸಂದರ್ಭದಲ್ಲಿ ಇಂಥ ಪರಿಕಲ್ಪನೆಯ ಹುಡುಕಾಟ ಅಷ್ಟು ಸುಲಭವಲ್ಲ. ಈ ಬಗೆಯ ಸಂಬಂಧಗಳಲ್ಲಿ ಇಬ್ಬರೂ ಸುಖವಾಗಿದ್ದಾರೆಯೆ, ಅಪಮಾನ ಎದುರಿಸಬೇಕಾಗಿ ಬಂದಾಗ ಯಾರು ಇದಕ್ಕೆ ಮುಖಾಮುಖಿಯಾಗಬೇಕಾಯಿತು ಎನ್ನುವ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕಾಗಿದೆ.

## ಗೌಪ್ಯತೆ ?

ಜೋಗತಿಯಾಗಲಿ ಪಾತರದವಳಾಗಲಿ ತಾವು ಇಟ್ಟುಕೊಂಡ ಗಂಡಸರ ಕುರಿತು ಹೇಳಿಕೊಂಡಂತೆ ಪುರುಷರು ತಮ್ಮ ಸಂಬಂಧದ ಬಗ್ಗೆ ಮಾತನಾಡಿದ್ದು ಅಪರೂಪ. ಅಷ್ಟೇ ಅಲ್ಲ ಇಬ್ಬರ ಸ್ನೇಹಸಂಬಂಧವನ್ನು ನೋಡಿದವರೂ ಕೂಡ ಸಾಕ್ಷಿದಾರರಾಗಿ ನಿಲ್ಲಲಿಲ್ಲ. "ಅವರು ದೊಡ್ಡೋರು, ಪಾತರದವರ ಕೂಡ ಸಂಬಂಧ ಐತಿ, ಜೋಗತೇರ ಕೂಡ ಸಂಬಂಧ ಐತಿ ಅಂದರ ಅವರ ವ್ಯಕ್ತಿತ್ವಕ್ಕೆ ಕುಂದ ಬರತೈತಿ. ಏನೋ ಒಂದು ಕಾಲಕ್ಕ ಆಯ್ತು ಹೋಯ್ತು, ಅದನ್ನ ಹೆಚ್ಚು ಮಾತಾಡಬಾರದು" ಎಂದವರೇ ಹೆಚ್ಚು. ಆದರೆ ಜೋಗತಿಯ, ಪಾತರದವಳ ಲೈಂಗಿಕ ನಿಷ್ಠೆಯನ್ನು ಮಾತ್ರ ಒತ್ತಿ ಹೇಳುತ್ತಿದ್ದರು. ಹೀಗಾಗಿ ಇವರಿಬ್ಬರ ಸ್ನೇಹಸಂಬಂಧದ ಹಿನ್ನೆಲೆ ಹಾಗೂ ಅದರ ಸ್ವರೂಪ ಎಂಥದ್ದು ಎಂದು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ. ಯಾಕೆಂದರೆ ಈ ಬಗೆಯ ವಿವಾಹಬಾಹಿರ ಸಂಬಂಧಗಳು ನಮ್ಮ ಸಮಾಜದಲ್ಲಿ ಮುಕ್ತವಾಗಿಲ್ಲ.

ಪುರುಷ, ವಿವಾಹಬಾಹಿರ ಸಂಬಂಧಗಳನ್ನು ಹೊಂದುವುದು ಹಿರಿಮೆ, ಸಾಮರ್ಥ್ಯ ಮತ್ತು ಘನತೆಯೆನ್ನುವಂತೆ ನಟಿಸುತ್ತಾನೆ. ಇದು ಫ್ಯೂಡಲ್ ಸಮಾಜದ ಪಳಯುಳಿಕೆ. ಜೋಗತಿಯರನ್ನು, ಪಾತರದವರನ್ನು ಇಟ್ಟುಕೊಳ್ಳುವುದೇ ಪ್ರತಿಷ್ಠೆಯಾಗಿದ್ದ ಕಾಲದಲ್ಲಿ ಈ ಬಗೆಯ ಸಂಬಂಧಗಳು ಗೌಪ್ಯವಾಗಿರಲಿಲ್ಲ. ಹೊರನೋಟಕ್ಕೆ ಮುಕ್ತವಾಗಿಯೇ ಇದ್ದವು ಎನಿಸಿದರೂ ಅಂತರ್ಯದಲ್ಲಿ ಗುಪ್ತತೆಯನ್ನು ಬಯಸುತ್ತಿದ್ದವು. ಇಂಥವಳು ಇಂಥವನಿಗೆ ಸೇರಿದವಳು ಎನ್ನುವ ಸಂಗತಿ ಮಾತ್ರ ಬಹಿರಂಗವಾಗುತ್ತಿತ್ತು. ಯಾಕೆಂದರೆ ಅವಳ ಮೇಲೆ ತನ್ನನ್ನು ಬಿಟ್ಟು ಪರಪುರುಷರು ಕಣ್ಣುಹಾಕಬಾರದು ಎನ್ನುವ ಉದ್ದೇಶ ಅದರಲ್ಲಿ ಪ್ರಧಾನವಾಗಿತ್ತು. "ನಮ್ಮ ಮಗಾ ಪಾತರದಕಿನ ಇಟ್ಕೊಂಡಿದ್ದಾ. ಅಂವಾ, ನಾವು ರಾತ್ರಿ ಎಲ್ಲಾರೂ ಮಲಗಿದಾಗ ಕಳ್ಳತನದಿಂದ ಯಾವಾಗ ಹೋಗತಿದ್ದನೋ ಗೊತ್ತಾಗತ್ತಿದ್ದಿಲ್ಲ. ಬೆಳಕ ಹರಿಗೂಡದ ಮತ್ತ ಮನ್ಯಾಗ ಬಂದ್ ಮಲಗಿರಿತಿದ್ದ. ನೋಡಿದವರಿಗಿ ಅಂವಾ ಮನಿಬಿಟ್ಟು ಎಲ್ಲೂ ಹೋಗಿಲ್ಲ ಅಂತ ಅನಿಸ್ತಿತ್ತು. ಅವನ ಹ್ಯಾಣ್ತಿಗೂ ಗೊತ್ತಾಗ್ತಿದ್ದಿಲ್ಲ" ಎಂದು ಹೇಳಿದ ಲಕ್ಷ್ಮೇಶ್ವರದ ಬಾಲು ಕುಲಕರ್ಣಿ ಅವರ ಮಾತುಗಳು ಅಂತರ್ಯದಲ್ಲಿ ಅದು ಕಾಯ್ದುಕೊಂಡು ಬಂದ ಗೌಪ್ಯತೆಗೆ ಸಾಕ್ಷಿಯಾಗಿದೆ. ಗಂಡಸರು ಜೋಗತಿಯರೊಂದಿಗೆ, ಪಾತರದವರೊಂದಿಗೆ ಸಂಬಂಧವಿಟ್ಟುಕೊಳ್ಳುವುದು ತಪ್ಪಲ್ಲ. ಆದರೆ ಅಂತಹ ಸಂಬಂಧಗಳ ಕುರಿತು ಸಾರ್ವಜನಿಕವಾಗಿ ಚರ್ಚಿಸುವಂತಿಲ್ಲ. ಪ್ರಸ್ತುತ ಸಮಾಜದಲ್ಲಿ ಇಂಥವರನ್ನು ಇಟ್ಟುಕೊಂಡಿದ್ದಾನೆ ಎನ್ನುವ ಮಾತೇ, ಪುರುಷ ವ್ಯಕ್ತಿತ್ವಕ್ಕೆ ಕಪ್ಪು ಚುಕ್ಕೆಯನ್ನಿಡುವಂಥದ್ದಾಗಿದೆ. ಗಂಡಸಿನ ಸಾಧನೆಗಳನ್ನು ರಾಜಾರೋಷವಾಗಿ ಹೇಳಿದಂತೆ, ಅವನೊಂದಿಗೆ ಪಾತರದವರು, ಜೋಗತಿಯರು ಸಂಬಂಧವಿಟ್ಟುಕೊಂಡಿದ್ದಾರೆ ಎಂದು ಹೇಳುವಂತಿಲ್ಲ. ಇವತ್ತಿನ ಸಮಾಜವು ಇಂತಹ ಸಂಬಂಧಗಳನ್ನು ಉಪೇಕ್ಷಿಸುವುದರಿಂದ ಅದು ಗೌಪ್ಯತೆಯನ್ನು ಬಯಸುತ್ತದೆ. ಜೋಗತಿಯರು ಮತ್ತು ಪಾತರದವರು ತಾವು ಸಂಬಂಧವಿಟ್ಟುಕೊಂಡ ಪುರುಷರ ಜೊತೆಗೆ ಗಟ್ಟಿಯಾದ ಸಂಬಂಧ ಹೊಂದಲು ಸಾಧ್ಯವಾಗದೆ ಇರುವುದಕ್ಕೆ ಇನ್ನೂ ಕೆಲವಾರು ಸಾಮಾಜಿಕ ಸಂಗತಿಗಳು ಕ್ಷೇತ್ರ ಕಾರ್ಯದಲ್ಲಿ ದೊರೆತವು. ಪಾತರದವರೊಂದಿಗೆ ಸಂಬಂಧವಿಟ್ಟುಕೊಂಡ ಪುರುಷರು ಮೇಲ್ವರ್ಗದವರು, ಮೇಲ್ಜಾತಿಯವರೇ ಆಗಿರುತ್ತಿದ್ದರು. ಹೀಗಾಗಿ ಅವರು ಹಗಲುಹೊತ್ತಿನಲ್ಲಿ ತಮ್ಮ

ಹೊಲಗದ್ದೆಗಳಲ್ಲಿ, ಮಳಿಗೆಗಳಲ್ಲಿ ಮೇಲುಸ್ತುವಾರಿಯನ್ನು ಮಾಡುತ್ತಿದ್ದರು. ಇದರಲ್ಲಿಯೇ ಸ್ವಲ್ಪ ಸಮಯ ಇಟ್ಟುಕೊಂಡು ಸಮಾಜಸೇವಾಕಾರ್ಯದಲ್ಲಿ ತೊಡಗಿಕೊಳ್ಳುತ್ತಿದ್ದರು. ಜೋಗತಿಯರೊಂದಿಗೆ ಇರುವವರು. ದಿನದ ವೇಳೆಯಲ್ಲಿ ಪಾತರದವರ, ಜೋಗತಿಯರ ಮನೆಯಲ್ಲಿ ಅವರೊಂದಿಗೆ ಸಂಬಂಧವಿಟ್ಟುಕೊಂಡ ಗಂಡಸು ಕಾಣಿಸಿಕೊಂಡರೆ, ಅಂಥವರನ್ನು ಸಮಾಜವು ತಿರಸ್ಕಾರದಿಂದ ನೋಡುತ್ತದೆ. "ಮೂರು ಹೊತ್ತು ಪಾತರದಕಿ ಮನ್ಯಾಗ ಇರತ್ಯಾನ. ಇಜ್ಜತ್ತಿನ ಮನಸ್ಯಾ ಅಲ್ಲ ತಗಿ ಅಂವಾ. ಗಂಡ್ಸಾದವನು ಯಾ ವ್ಯಾಳಿ ಹೋಗಬೇಕು ಅನ್ನುದನ್ನ ತಿಳಿಕೊಂಡಿರಬೇಕು" ಎಂದು ಹೀಗಳೆಯುವವರು. ಜೋಗತಿಯರು, ಪಾತರದವರು ದೈಹಿಕ ಸುಖವನ್ನು ನೀಡುವರು. ಅದನ್ನು ಪಡೆಯಲು ಈ ಸಮಾಜ ಒಂದು ವೇಳೆಯನ್ನು ನಿಗದಿಪಡಿಸಿದೆ. ಆ ಸಮಯದಲ್ಲಿ ಗಂಡಸು ಅವರಲ್ಲಿಗೆ ಹೋಗಿ ಬರುವುದನ್ನು ತಪ್ಪೆಂದು ಭಾವಿಸುವುದಿಲ್ಲ. ರಾಜ ಮಹಾರಾಜರು ನೂರಾರು ಸೂಳೆಯರನ್ನಿಟ್ಟು-ಕೊಳ್ಳುವುದು ಪ್ರತಿಷ್ಠೆಯಾಗಿತ್ತು. ಹಾಗೆಂದ ಮಾತ್ರಕ್ಕೆ ಹಗಲು ರಾತ್ರಿ ಅವರ ಜೊತೆಯಲ್ಲಿಯೇ ಇದ್ದರೆ ವಿಷಯ ಲೋಲುಪನಾಗಿ ಕಾಣಿಸಿಕೊಳ್ಳುತ್ತಾರೆ. ಪುರುಷರು ವಿವಾಹಬಾಹಿರ ಸಂಬಂಧ ಹೊಂದುವುದರಲ್ಲಿ ತಪ್ಪಿಲ್ಲ. ಆದರೆ ಅದರಲ್ಲೇ ಹಗಲು-ರಾತ್ರಿ ಕರಗಿಹೋಗುವುದನ್ನು ಸಮಾಜ ಖಂಡಿಸುತ್ತದೆ. ಹಗಲಿನಲ್ಲಿ ಪಾತರದವಳ, ಜೋಗತಿಯ ಮನೆಯಲ್ಲಿದ್ದಾನೆಂದರೆ, ಲೈಂಗಿಕ ಸುಖಕ್ಕಾಗಿಯೇ ಎಂದು ಸಮಾಜ ಗ್ರಹಿಸುತ್ತದೆ. ದೈಹಿಕ ಸುಖದಾಚೆ ಅವರ ಸಂಬಂಧಗಳು ವಿಸ್ತರಿಸಿಕೊಂಡಿರಬಹುದು ಎಂಬುದನ್ನು ನಮ್ಮ ಸಮಾಜ ಒಪ್ಪುವುದಿಲ್ಲ. ಹೀಗಾಗಿ ಇವರಿಬ್ಬರ ಸಂಬಂಧವು ಅಷ್ಟು ಗಾಢವಾಗುತ್ತಿರಲಿಲ್ಲ. ಇದಕ್ಕೆ ಅಪವಾದವಾದ ಉದಾಹರಣೆಗಳು ಅಪರೂಪಕ್ಕೆ ದೊರೆಯಬಹುದು. ಆದರೆ ಅದನ್ನೇ ಸಾಮಾನ್ಯೀಕರಿಸಿ ಒಂದು ನಿರ್ಧಾರಕ್ಕೆ ಬರಲಾಗುವುದಿಲ್ಲ. ಪಾತರದವರಲ್ಲಿ, ಜೋಗತಿಯರಲ್ಲಿ ಹೆಚ್ಚಾಗಿ ಗುರುತಿಸಿದ್ದುದು ಎಲ್ಲರೊಡನೆಯೂ ಸರಳವಾಗಿ, ಸಹಜವಾಗಿ ಬೆರೆಯುವ ಅವರ ಸ್ನೇಹ ಸ್ವಭಾವ. ಹೀಗಾಗಿ ಅವರು ತಾವು ಸಂಬಂಧ ಇಟ್ಟುಕೊಂಡವನ ಕುರಿತಂತೆ ಹೆಚ್ಚಿನ ವಿವರಣೆಯನ್ನು ನೀಡಬಾರದು ಎನ್ನುವ ಧೋರಣೆ ಹೊಂದಿದ್ದವರಲ್ಲ. ಪ್ರಧಾನ ಧಾರೆಯ ಸಾಂಸ್ಕೃತಿಕ ಮೌಲ್ಯಗಳಿಂದ ಅವರು ಎದುರಿಸುತ್ತಿರುವ ಹತಾಶೆ, ನಿರಾಶೆ, ಅಪಮಾನ ಹಾಗೂ ಅಭದ್ರತೆಗಳು ಈ ಬಗೆಯ ಒತ್ತಡಗಳನ್ನು ಅವರ ಮೇಲೆ ಹೇರುತ್ತವೆ.

## ಸೌಂದರ್ಯ-ದೇಹ

ಪಾತರದವರಲ್ಲಿ ಯೌವನ, ಸೌಂದರ್ಯ ಹಾಗೂ ಅವರಲ್ಲಿಯ ಗಾಯನ ಇಲ್ಲವೆ ನೃತ್ಯ ಪ್ರತಿಭೆ ಪ್ರಧಾನ ಆಕರ್ಷಕ ಗುಣಗಳಾಗಿವೆ. ಜೋಗತಿಯರಲ್ಲಿ ಸೌಂದರ್ಯ, ಯೌವನ ಆಕರ್ಷಕ ಕೇಂದ್ರಗಳಾಗಿವೆ. ಇವರೊಂದಿಗೆ ಸಂಬಂಧವಿಟ್ಟುಕೊಂಡ ಪುರುಷರ ಜಾತಿ ಅಂತಸ್ತುಗಳೇ ಢಾಳಾಗಿ ನಿಲ್ಲುತ್ತವೆ. ಗಂಡಸರಲ್ಲಿ ದೈಹಿಕ ಆಕಾಂಕ್ಷೆ ಪ್ರಧಾನವಾಗಿದ್ದರೆ, ಪಾತರದವರಲ್ಲಿ, ಜೋಗತಿಯರಲ್ಲಿ ಆರ್ಥಿಕ ಹಾಗೂ ಸಾಮಾಜಿಕ ಅಂತಸ್ತು ಪಡೆಯುವ ಉದ್ದೇಶ ಪ್ರಮುಖವಾಗಿರುತ್ತದೆ. ಇವು ಹೊರನೋಟಕ್ಕೆ ನಿಚ್ಚಳವಾಗಿ ಕಾಣುವ ಸಂಗತಿಗಳು. ಆದರೆ ಇದಕ್ಕೆ ವ್ಯತಿರಿಕ್ತವಾದ ಸಂಗತಿಗಳು ಅವರ ಸಂಬಂಧಗಳಲ್ಲಿ ಬೆಸೆದುಕೊಂಡಿರುತ್ತವೆ. ಜೋಗತಿಯಾದ ಯಮುನವ್ವ - "ಅವನಿಗಿ ದೇಹಾ ಕೊಟ್ನಿ, ಸುಖಾ ಕೊಟ್ನಿ, ಕಷ್ಟದಾಗ ನನ್ನ ಹಂತ್ಯಾಕ ಇದ್ದ ಬಂಗಾರ ದುಡ್ಡೂ ಕೊಟ್ನಿ. ಆಕಿ ನನ್ನಕಿ ಅಂತ ಒಂದ ಕಡೆನೂ ಹೇಳಿಲ್ಲ. ಎಷ್ಟ ಮಾಡಿದ್ರೂ ನಾನು ಅವನ ಹೆಣ್ತಿ ಆಗಂಗಿಲ್ಲ" ಎಂದು ದೊಡ್ಡದಾದ ನಿಟ್ಟುಸಿರು ಬಿಟ್ಟಳು. ತೇರದಾಳದ ಅಲ್ಲಾಸಾನಿ - "ವಯಸ್ಸಿರುತನ ದಿನಾ ಬಿಟ್ಟ ದಿನಾ ಬರ್ತಿದ್ದ. ಪ್ರೀತಿಯಿಂದ ನೋಡ್ಕೋತ್ತಿದ್ದ. ಮುಪ್ಪ್ ಬಂದ ಮ್ಯಾಲೆ ಯಾಕ ಬರತಾನು ? ಹರೆವಿದ್ದಾಗ ಇಂಥಕಿನ ಇಟಗೊಂಡಿನಿ ಅನ್ನಾಕ ನಮ್ಮಂಥವರು ಬೇಕಾಗ್ತಿದ್ರು. ಇತ್ತಿತ್ತಲಾಗಿ ತಿಂಗಳಿಗೊಮ್ಮೆ, ಎರಡು ತಿಂಗಳಿಗೊಮ್ಮೆ ಬರ್ತಿದ್ದಾ. ಅದರ ನೆನಪು ಬ್ಯಾಡ ತಗಿ ಅಕಾಡ" ಎಂದು ಎದ್ದು ಹೋದಳು. ತನ್ನನ್ನು ಒಂದು ಶೃಂಗಾರ ವಸ್ತುವಾಗಿ, ಪದಾರ್ಥಜೀವಿಯಾಗಿ ಪರಿಗಣನೆ ಮಾಡಿರುವುದರ ಕುರಿತಂತೆ ಅವರಲ್ಲಿ ವಿರೋಧವಿತ್ತು. ತಮ್ಮೊಂದಿಗೆ ಸಂಬಂಧವಿಟ್ಟುಕೊಂಡ ಪುರುಷನ ಪ್ರಾಮಾಣಿಕ ಪ್ರೀತಿಗಾಗಿ ಹಪಹಪಿಸಿದ ಜೋಗತಿಯರು, ಪಾತರದವರು ತಾವು ಕೂಡಿಟ್ಟ ಹಣವನ್ನು, ಬಂಗಾರವನ್ನು, ಅವನ ಕಷ್ಟಕಾಲದಲ್ಲಿ ಕೊಟ್ಟದ್ದಿದೆ. ಅವನ ಬರುವಿಕೆಗಾಗಿ ದಿನವಿಡಿ ಕಾತರಿಸಿದ್ದಿದೆ. ಅವರ ಈ ನಿರೀಕ್ಷೆಯನ್ನು ಕೇವಲ ದೈಹಿಕ ಸುಖಕ್ಕೆ ಸೀಮಿತಗೊಳಿಸಲಾಗುವುದಿಲ್ಲ. ಆ ಕಾತರಿಸುವಿಕೆ-ಯಲ್ಲಿ ಗಂಡಸು ಅವಳೊಂದಿಗೆ ಇಟ್ಟುಕೊಳ್ಳಬಯಸುವ ರಾತ್ರಿ ಸಂಬಂಧದಾಚೆಗಿನ ಕನಸುಗಳಿವೆ. ಬಹುಪಾಲು ಗಂಡಸರು ತಮ್ಮ ಹರೆಯದ ಹಾಗೂ ಹಣದ ಪ್ರತಿಷ್ಠೆಯನ್ನು ಸಾರಲು, ಜೋಗತಿಯರೊಂದಿಗೆ, ಪಾತರದವರೊಂದಿಗೆ ಸಂಬಂಧವಿಟ್ಟುಕೊಳ್ಳುತ್ತಾರೆ. ಅವರ ಯೌವನ ಜಾರಿವಿಕೆಯಲ್ಲಿ ಈ ಎಲ್ಲ ಹುಸಿ ಪ್ರತಿಷ್ಠೆಗಳು ಕರಗಿ ಹೋಗಿರುತ್ತವೆ. ಹೆಣ್ಣಿನ ಬಗೆಗಿನ ಲಾಲಸೆ ವ್ಯಾಮೋಹಗಳು ತಣ್ಣಗಾಗುತ್ತವೆ. ಜೋಗತಿಯರು, ಪಾತರದವರು ಇಟ್ಟುಕೊಂಡವನೊಟ್ಟಿಗಿನ ಸಂಬಂಧವನ್ನು ಗಂಡಸರಂತೆ ಯಾಂತ್ರಿಕವಾಗಿ ಸ್ವೀಕರಿಸಲಾಗುವುದಿಲ್ಲ. ಸಮಾಜ ಗ್ರಹಿಸಿದ ಹಾಗೆ ಪುರುಷ ಸಂಪತ್ತಿಗೆ, ದೈಹಿಕ, ಸೌಷ್ಠವಕ್ಕೆ ಮನಸೋತವರಲ್ಲ. ಜೋಗತಿಯರ, ಪಾತರದವರ ಭಾವನೆಗಳು ಅಷ್ಟು ಕೃತ್ರಿಮವಾಗಿರುವುದಿಲ್ಲ. ವ್ಯಾಪಾರಿ ಧೋರಣೆಯನ್ನು ಹೊಂದಿರುವುದಿಲ್ಲ

ಪಾತರದವರಲ್ಲಿಯ ಪ್ರತಿಭೆಗಿಂತಲೂ ಸೌಂದರ್ಯದ ಜೊತೆಗೆ ಹೆಣ್ತನ, ಸೇವಾಮನೋಭಾವ, ಪುಕ್ಕಲುತನ, ಭಯ ಮೊದಲಾದ ಗುಣಗಳು ಆಕರ್ಷಣೀಯವಾಗಿದ್ದವು. "ಇಬ್ಬರ ಹೆಣತ್ಯಾರ ಜೊತಿಗಿ ಪಾತರದಕಿನ ಸಾಕುದಂದರ ಬಾಳ ಕಷ್ಟ, ಅದಕ್ಕೂ ಒಂದ ತಾಕತ್ತ್ ಬೇಕಾಗ್ತೈತಿ. ತಾತೆಪ್ಪನವರು ಗಂಡಸು

ಅಂದ್ರೆ ಗಂಡ್ಸು, ಮೂರು ಮಂದಿಗೂ ಸಮನಾಗಿ ನೋಡ್ಕೊತಾ ಇದ್ರು. ಅವ್ರೂ ಹಂಗ ಇರತಿದ್ರು. ಗುಲಾಬಸಾನಿ ಒಂದ ದಿವ್ಸನೂ ಎದುರ ಮಾತನಾಡಿದಕಿ ಅಲ್ಲ. ಬಲೆ ಪುಕ್ಕಿ ಹೆಣ್ಣುಮಗಳು. ಹೊರಗ ಹೋಗಬೇಕಿದ್ರ ತಾತೆಪ್ಪನವರ ಒಪ್ಪಿಗಿ ತಗೊಂಡ ಹೋಗತಿದ್ಲು. ಅವ್ರು ಬಗ್ಗಿ ಬಾಳ ಭಯಾ ಭಕ್ತಿ ಇಟ್ಕೊಂಡಿದ್ದಳು" ಎಂದ ಲಕ್ಷ್ಮೇಶ್ವರದ ಬಾಬುರಾವ್ ಕುಲಕರ್ಣಿ ಅವರ ಮಾತುಗಳು ಪ್ರಧಾನ ಸಮಾಜದ ಮನೋಭಾವವನ್ನು ಸಾಬೀತುಪಡಿಸುತ್ತವೆ. ದೈಹಿಕವಾಗಿ, ಮಾನಸಿಕವಾಗಿ, ಆರ್ಥಿಕವಾಗಿ ಸದೃಢವಾಗಿರುವ ಗಂಡಸಿಗೆ ಮಾತ್ರ ಹೆಂಡತಿಯರನ್ನು, ಇಟ್ಟುಕೊಂಡವರನ್ನು ನಿಭಾಯಿಸಲು ಸಾಧ್ಯ. ಪತ್ನಿಯರು, ಇಟ್ಟುಕೊಂಡವರು ಪುರುಷನಂತೆ ಯಾವ ಸಮಸ್ಯೆಗಳನ್ನು ಎದುರಿಸಬೇಕಿಲ್ಲ. ಅವರು ಗಂಡಸಿನ ಆಶ್ರಯದಲ್ಲಿ ಸುಖವಾಗಿರುತ್ತಾರೆ ಎನ್ನುವ ಗ್ರಹಿಕೆಯೇ ಮೇಲ್ನೋಟಕ್ಕೆ ಕಾಣುತ್ತದೆ. ಮನೆಯ ಒಳಗೆ ಮತ್ತು ಹೊರಗೆ ಹಂಚಿಹೋಗುವ ಗಂಡಸಿನ ಪ್ರೀತಿಯನ್ನು ತನ್ನೆಡೆಗೆ ಕೇಂದ್ರೀಕರಿಸಿಕೊಳ್ಳಲು, ಹೆಂಡತಿಯರು, ಇಟ್ಟುಕೊಂಡವರು ಸದಾ ಹೆಣಗಾಡುತ್ತಾರೆ. ಜೊತೆಗೆ ಆರ್ಥಿಕ ಅಭದ್ರತೆಯು ಅವರನ್ನು ಕಾಡುತ್ತಿರುತ್ತದೆ. ಆದರೆ ಪುರುಷ ಪ್ರಧಾನ ಸಮಾಜ ಹೆಣ್ಣಿನ ಈ ಒಳ ಹೊಯ್ದಾಟಗಳನ್ನು, ಸಂಕಟಗಳನ್ನು ಕಂಡೂ ಕಾಣದಂತಿರುತ್ತದೆ. ಕಷ್ಟ, ಗಂಡಸಿಗೆ, ಸುಖ ಹೆಂಗಸಿಗೆ ಎನ್ನುವ ಚಿತ್ರಣವನ್ನೇ ನೀಡಿದೆ. ಹೆಣ್ಣು ಮೃದು ಸ್ವಭಾವದವಳು, ಜೊತೆಗೆ ಕಾಮುಕಿ, ದುರಾಸೆಯುಳ್ಳವಳು. ಗಂಡು, ಗಟ್ಟಿಮನಸ್ಸುಳ್ಳವನು, ಗಟ್ಟಿ ದೇಹವುಳ್ಳವನು ಜೊತೆಗೆ ಸಂಪಾದಿಸುವವನು ಕೂಡ. ಹೀಗಾಗಿ ಆತನು ಹೆಂಡತಿಯರನ್ನು, ಇಟ್ಟುಕೊಂಡವರನ್ನು ನಿಭಾಯಿಸಬಲ್ಲನು ಮತ್ತು ನಿಯಂತ್ರಿಸಬಲ್ಲನು ಎಂದೇ ಪುರುಷ ಪ್ರಧಾನ ಸಮಾಜ ಪ್ರಚಾರ ನೀಡಿದೆ. ಕಟ್ಟಿಕೊಂಡವಳಷ್ಟೇ ಅಲ್ಲ, ಇಟ್ಟುಕೊಂಡವಳು ಕೂಡ ಧೈರ್ಯವಂತೆಯಾಗಿರಕೂಡದು. ಪ್ರತಿಯೊಂದಕ್ಕೂ ತನ್ನನ್ನೇ ಆಶ್ರಯಿಸಬೇಕು. ತನ್ನ ಅಣತಿಯಂತೆಯೇ ನಡೆದುಕೊಳ್ಳಬೇಕು. ಲೈಂಗಿಕ ನಿಷ್ಠೆಯನ್ನು ಸದಾಕಾಯ್ದುಕೊಂಡಿರಬೇಕು. ಹೀಗೆ ಪುರುಷಶಾಹಿ ಸಮಾಜ ತನ್ನ ಪ್ರಾಬಲ್ಯಕ್ಕೆ ಅನುಕೂಲವಾಗುವಂತೆ ಸ್ತ್ರೀಯನ್ನು ನಿರ್ವಚಿಸಿದೆ.

## ನೈತಿಕ ಆಸರೆ ?

ಇಟ್ಟುಕೊಂಡವನ ಸುಖದುಃಖಗಳನ್ನು ತಾನು ವಿಚಾರಿಸಿಕೊಂಡಂತೆ, ಸಾಧ್ಯವಾದರೆ ಸಹಾಯ ಮಾಡಿದಂತೆ, ಆತನೂ ತನ್ನ ಕಷ್ಟನಷ್ಟಗಳಿಗೆ ಹಣಕ್ಕಿಂತಲೂ ಹೆಚ್ಚಾಗಿ ನೈತಿಕ ಆಸರೆಯನ್ನು ನೀಡುತ್ತಾನೆಂದು ನಿರೀಕ್ಷಿಸಿ ನಿರಾಶರಾದವರೇ ಹೆಚ್ಚು. ಅದನ್ನು ತನ್ನ ಹಣೆಬರಹವೆಂದು ನುಂಗಿಕೊಂಡವರು ಬಹಳ. ಒಂದು ಮಗುವಾದ ತಕ್ಷಣ ಗೆಳೆಯನ ತಿರಸ್ಕಾರಕ್ಕೆ ಒಳಗಾದ ಸಂಕೇಶ್ವರದ ಗೋಹರಜಾನ್, ಆತನಿಗಾಗಿ ಹಗಲು ರಾತ್ರಿ ಅತ್ತಿದ್ದಿದೆ. ಆರೆ ಹೊಟ್ಟೆಯಲ್ಲಿ ಮಲಗಿದ್ದಿದೆ: ಆತ್ಮಹತ್ಯೆಗೆ ಪ್ರಯತ್ನಿಸಿದ್ದಿದೆ. ಬರಿ ಶಂಕೆ, ಭಯ, ಅಪಮಾನಗಳನ್ನು ತುಂಬಿಕೊಂಡ ಗೋಹರಜಾನ್‌ನಂಥವರು ಬರುಬರುತ್ತ ನಿಷ್ಕ್ರಿಯರಾಗಿ ಬಿಡುವರು. ತಮ್ಮಲ್ಲಿಯ ಕಲಾಪ್ರತಿಭೆಯ ಉಜ್ವಲ ಭವಿಷತ್ತಿಗಾಗಿ ಶ್ರಮಿಸುವ ಮಾನಸಿಕ ದೃಢತೆಯನ್ನು ಕಳೆದುಕೊಳ್ಳುವರು. ಈ ಯಾವ ಘಟನೆಗಳು ಗಂಡಸರನ್ನು ಮಂಕಾಗಿಸುವುದಿಲ್ಲ. ಅವರ ಭವಿಷತ್ತಿಗೆ ಕೌಟುಂಬಿಕ, ಸಾರ್ವಜನಿಕ-ತೊಡಕಾಗುವುದಿಲ್ಲ.

ತಮ್ಮ-ತಮ್ಮ ಸಂಬಂಧದ ಕುರಿತು ಪರಸ್ಪರರಲ್ಲಿ ಗೌರವವಿದ್ದರೆ, ಆತ್ಮವಿಶ್ವಾಸವಿದ್ದರೆ, ಅಂಥಲ್ಲಿ ಲಿಂಗಸಮಾನತೆ ಇರುತ್ತದೆ. ಜೋಗತಿಯರು, ಪಾತರದವರು ತಮ್ಮೊಡನೆ ಸಂಬಂಧವಿಟ್ಟುಕೊಂಡ ಪುರುಷರ ಕುರಿತಂತೆ ಅಪಾರ ಗೌರವ ಹಾಗೂ ವಿಶ್ವಾಸವನ್ನಿಟ್ಟಿದ್ದರು. ಆದರೆ ಅದೇ ಭಾವನೆಯನ್ನು ಆ ಗಂಡಸರು ಹೊಂದಿರಲಿಲ್ಲ. ಅವರ ಪಾಲಿಗೆ ಅವಳು 'ಇಟ್ಟುಕೊಂಡವಳು' ಅಷ್ಟೇ.

ಜೋಗತಿಯರಿಗೆ, ಪಾತರದವರಿಗೆ ತಮ್ಮ-ಸಂಬಂಧದ ಕುರಿತಂತೆ ಸಮಾಜದಲ್ಲಿ ಅಷ್ಟೇ ಯಾಕೆ, ತಮ್ಮೊಡನೆ ಸಂಬಂಧ ಹೊಂದಿದ ಗಂಡಸರೇ ತಮ್ಮನ್ನು ಗೌರವಿಸುವುದಿಲ್ಲ ಎನ್ನುವುದು ಅತಿ ನೋವಿನ ಸಂಗತಿಯಾಗಿತ್ತು. ಮದುವೆಯಾದರೆ ಸಮಾಜ ಮತ್ತು ಗಂಡ ಇಬ್ಬರೂ ತಮ್ಮನ್ನು ಆದರಿಸುವವರು ಎಂದುಕೊಂಡ ಅವರು ವಿವಾಹಕ್ಕಾಗಿ ಹಪಾಹಪಿಸಿದ್ದಿದೆ. "ನಾವು ನಮ್ಮ ಜೀಂವಾ ಅಂವಗ ಕೊಟ್ರೂ ಇಟಗೊಂಡಕಿ ಅನ್ನ ಪಟ್ಟಾ ತಪ್ಪುದಿಲ್ಲ. ಈ ಗಂಡಸರs ಅಷ್ಟs. ಹರೆವ ಇರುತನಕ ನಾವು ಮಜಾ ಮಾಡಾಕಬೇಕು. ಸಮಾಜದವರಂಗ ಅವರೂ ನಮ್ಮನ್ನ ಹಗುರಾಗಿ ಕಾಣ್ತಾರ. ಕುಣೆಗೆ ಹೋಗು ತನಕ ಈ ಗಂಡಸರ ಜೊತಿಗಿ, ಈ ಸಮಾಜದ ಜೊತಿಗಿ ಗುದ್ದಾಡ್ತ ಹೋಗಬೇಕು" ಎಂದು ನಿಟ್ಟುಸಿರಿಟ್ಟ ಕಮಲಾಪುರದ ಎಲ್ಲವ್ವ ಅಂಥ ಸ್ತ್ರೀವರ್ಗದ ಹತಾಶೆ ಪ್ರತಿನಿಧಿಯಾಗಿ ನಿಲ್ಲುತ್ತಾಳೆ. ತಾವು ಗಂಡ ಹೆಂಡಂದಿರಂತೆ ಸಮಾಜದಲ್ಲಿ ಮುಕ್ತವಾಗಿರಬೇಕು ಎಂಬುದು ಅವರ ಮುಖ್ಯ ತುಡಿತವಾಗಿತ್ತು. ಜೋಗತಿಯರು, ಪಾತರದವರು ಈ ಹೆಸರುಗಳೇ ಅವರ ಬಗೆಗೆ ಸಮಾಜ ಹಗುರವಾದ ಧೋರಣೆಯನ್ನು ಹೊಂದಲು ಕಾರಣವಾಗಿದೆ. ಹಲವರ ಹಸಿದ ಕಾಮುಕ ಕಣ್ಣುಗಳಿಂದ ತಪ್ಪಿಸಿಕೊಳ್ಳಲು ಒಬ್ಬನ ತೋಳ್ತೆಕ್ಕೆಯನ್ನು ಆಶ್ರಯಿಸಬೇಕಾಯಿತು. ಇಟ್ಟುಕೊಂಡವನು ಆಕಸ್ಮಾತ್ ಬಿಟ್ಟು ಬಿಟ್ಟರೆ, ಮತ್ತೆ ಹಲವರ ಆಕ್ರಮಣ ಎದುರಿಸಬೇಕಲ್ಲ ಎನ್ನುವ ಆತಂಕವನ್ನು ಮುಪ್ಪು ಬಂದು ಅಪ್ಪಿಕೊಳ್ಳುವವರೆಗೂ ಎದುರಿಸುತ್ತಾರೆ. ಇಟ್ಟುಕೊಂಡವಳು ಎನ್ನುವ ಪದವೇ ಸಾಮಾಜಿಕ ನಿರ್ಲಕ್ಷ್ಯಕ್ಕೆ ಒಳಗಾದವಳು ಎನ್ನುವುದನ್ನೇ ಧ್ವನಿಸುತ್ತದೆ. ಹಣ ಹಾಗೂ ದೈಹಿಕ ಸುಖಕ್ಕಿಂತಲೂ ಅವರಿಗೆ ಮುಖ್ಯವಾಗಿ ಬೇಕಾದುದು ಸಾಮಾಜಿಕ ಭದ್ರತೆ ಹಾಗೂ ಗೌರವ.

ತೃಪ್ತ ಜೋಡಿಗಳು ಹುಕ್ಕೇರಿಯ ಅಮಿನಾ, ಹುನಗುಂದದ ಹುಲಿಗೆಮ್ಮ. ಇವರಿರ್ವರೂ ತಮ್ಮೊಡನೆ ಸಂಬಂಧ ಹೊಂದಿದ ಪುರುಷರ ಕುರಿತು ಸಂತೃಪ್ತಿ ಭಾವನೆಯನ್ನು ಹೊರಗೆಡುಹಿದರು. ಈ ಗೆಳೆಯರು ಇವರಿಗಾಗಿಯೇ ರಕ್ತಸಂಬಂಧಗಳನ್ನು

ಬಿಟ್ಟುಕೊಟ್ಟವರು. ಮದುವೆಯಾಗದೇ ಇವರೊಂದಿಗೆ ಗೆಳೆಯರಾಗಿ ಜೀವನ ಸವೆಸಿದವರು. ತಮ್ಮ ಗೆಳತಿಯರನ್ನು ಸಮಾನ ಗೌರವ, ಪ್ರೀತಿಯಿಂದ ಕಂಡವರು. ಎದುರಾದ ಅಪಮಾನವನ್ನು ಸಮಸಮವಾಗಿ ಹಂಚಿಕೊಂಡು ನುಂಗಿದವರು. ಇಡೀ ನನ್ನ ಕ್ಷೇತ್ರಕಾರ್ಯದಲ್ಲಿ ಎದುರಾದ ಅಪರೂಪದ ಸಂಬಂಧಗಳೆಂದರೆ ಇವರಿಬ್ಬರದೇ. ಇವರ ಸಂಬಂಧಗಳು ಬದುಕುವ ಕ್ರಮಗಳು ಹೊಸ ವ್ಯಾಖ್ಯಾನಗಳಾಗಿದ್ದವು. ಈ ಎರಡೂ ಜೋಡಿಗಳು ಪ್ರಧಾನ ಸಮಾಜದ ಮೌಲ್ಯಗಳನ್ನು ಹುಸಿಗೊಳಿಸಿವೆ. ಪ್ರಸ್ತುತ ಸಮಾಜದ ಯಾವ ಒತ್ತಡಗಳು ಇವರ ಸಂಬಂಧಗಳನ್ನು ಸಡಿಲುಗೊಳಿಸಿಲ್ಲ. ಕುಟುಂಬದವರು, ಸಮಾಜದವರು ಹೀಗಳೆದರೂ ಅದಕ್ಕೆ ಕಿವಿಕೊಟ್ಟವರಲ್ಲ. ಅಮೀನಾ ಹಾಗೂ ಹುಲಿಗೆಮ್ಮನ ಗೆಳೆಯರು ಅವರನ್ನು ಮದುವೆಯಾಗಲು ಇಷ್ಟಪಟ್ಟವರು. ಅವರಿಗಾವ ಜಾತಿ ಹಾಗೂ ಸಿರಿವಂತಿಕೆಯ ಹಂಗು ಕಾಡಿಲ್ಲ. ಅವರ ಗೆಳತಿಯರು ಹೊಂದಿದ ಧರ್ಮದೀಕ್ಷೆಯೇ ಅವರನ್ನು ಮದುವೆಯಾಗದಂತೆ ತಡೆಹಿಡಿದುದು. ಹಾಗಂತ ಅವರಿಗೆ, ಪರಸ್ಪರ ಗೌರವಿಸುವಲ್ಲಿ, ಸುಖ ಅನುಭವಿಸುವಲ್ಲಿ, ಮನಬಿಚ್ಚಿ ಮಾತನಾಡಿಕೊಳ್ಳುವಲ್ಲಿ ಈ ಯಾವ ಸಂಗತಿಗಳೂ ತೊಡಕಾಗಿಲ್ಲ. ಪ್ರೀತಿ, ಗೌರವ ತುಂಬಿದ ಅಪ್ಪಟ ಮೈತ್ರಿ ಸಂಬಂಧ ಅವರದು. ಅವರ ನಡವಳಿಕೆಯಲ್ಲಿ, ಸಂಬಂಧದಲ್ಲಿ ಎಲ್ಲಿಯೂ ಅಶ್ಲೀಲತೆಯ ಎಳೆ ಕಾಣಿಸಲೇ ಇಲ್ಲ.

## ಇಂದ್ರಿಯ ಭೋಗ

ಬಹುಪಾಲು ಜೋಗತಿಯರು, ಪಾತರದವರು ತಾವು ಸಂಬಂಧಹೊಂದಿದ ಗಂಡಸಿಗೆ ದೈಹಿಕವಾಗಿ, ಮಾನಸಿಕವಾಗಿ ಅರ್ಪಿಸಿಕೊಂಡವರು. ಆದರೆ ಇವರು ನಂಬಿದ ಪುರುಷರು ಮಾತ್ರ ತಮ್ಮ ಸಂಸಾರಿಕ ಸಂಬಂಧಕ್ಕೆ ತೊಂದರೆಯಾಗದಂತೆ, ತಮ್ಮ ಮಾನಸಿಕ ಸ್ವಾಸ್ಥ್ಯವನ್ನು ಜತನದಿಂದ ಕಾಯ್ದುಕೊಂಡು, ಒಂದು ಮಿತಿಯಲ್ಲಿಯೇ ಇವರೊಡನೆ ಸಂಬಂಧ ಹೊಂದಿರುವರು. ಮದುವೆಯ ಮುಂಚೆ ಇವರೊಡನಿದ್ದರೂ ಸಾಂಪ್ರದಾಯಿಕವಾಗಿ ತಮ್ಮ ಜಾತಿಯ ಹುಡುಗಿಯೊಡನೆ ಲಗ್ನವಾಗುವುದನ್ನು ಬಿಡುವುದಿಲ್ಲ. ಅಮಿನಾ ಹಾಗೂ ಹುಲಿಗೆಮ್ಮನ ಗೆಳೆಯರಂತೆ ಇವರಿಗಾಗಿ ಮನೆಬಿಟ್ಟು ಬಂದವರಿಲ್ಲ. ಎಲ್ಲರೂ ತಮ್ಮ ತಮ್ಮ ಸಾಂಸಾರಿಕ ಚೌಕಟ್ಟಿನೊಳಗೆ ಬೆಚ್ಚಗಿದ್ದವರೇ ಹೆಚ್ಚು. ಜೋಗತಿಯರನ್ನು, ಪಾತರದವರನ್ನು ಹೊಂದಿಯೂ ಹೆಂಡತಿಯನ್ನು ನೋಯಿಸಿದವರಲ್ಲ. ತಮಗೆ ಅನುಕೂಲವಿದ್ದಾಗ, ಅಗತ್ಯವಿದ್ದಾಗ ಮಾತ್ರ ಇವರಲ್ಲಿಗೆ ಹೋಗುವರು. ಉಳಿದೆಲ್ಲ ವೇಳೆ ತಮ್ಮ ಕರಿಯರ್ ಹಾಗೂ ಸಾಂಸಾರಿಕ ಜೀವನಕ್ಕೆ ಮೀಸಲು. ಪಾತರದವರು, ಜೋಗತಿಯರು ತಂದೆಯಿದ್ದೂ ಅನಾಥತೆಯನ್ನು, ಜೊತೆಗಾರನಿದ್ದೂ ಒಂಟಿತನವನ್ನು ಅನುಭವಿಸುವರು. ಇವರೊಂದಿಗಿರುವ ಪುರುಷರಿಗೆ ಏಕಾಂಗಿತನ ಕಾಡುವುದಿಲ್ಲ. ಯಾಕೆಂದರೆ ಅವನಿಗೆ ಹೆಂಡತಿ ಮಕ್ಕಳಿದ್ದಾರೆ. ದಾಂಪತ್ಯಾತೀತ ಈ ಸಂಬಂಧವನ್ನು ಹೊರಗಿನ ಸಂಬಂಧವಾಗಿಯೇ ಪರಿಗಣಿಸುವ ಇವರು, ಈ ಹೆಣ್ಣು ಮಕ್ಕಳೊಂದಿಗೆ ಗಟ್ಟಿಯಾದ ಸಂಬಂಧವನ್ನು ಹೊಂದಲು ಆಸಕ್ತಿಯನ್ನು ತೋರಿಸವುದಿಲ್ಲ. ಅವಳ ಮೇಲೆ ಹಕ್ಕಿನ ಪುರುಷನಂತೆ ನಡೆದುಕೊಳ್ಳುತ್ತ ಒಂದು ಬಗೆಯ ಅಂತರವನ್ನು ಜಾಗ್ರತೆಯಿಂದ ಕಾಯ್ದುಕೊಂಡಿರುವರು. ಪುರುಷಪ್ರಧಾನ ಸಮಾಜದಲ್ಲಿ ಜೋಗತಿಯರ, ಪಾತರದವರ ಸಹವಾಸವು ಸುಖಾಪೇಕ್ಷೆಯುಳ್ಳದ್ದು. ಬೇಡವೆನಿಸಿದರೆ ಬಿಟ್ಟು ಬಿಡುವಂತಹದ್ದು. ಗಂಡಸರಿಗೆ ಕಾಮ ಎನ್ನುವುದು ಹಸಿವು ನೀರಡಿಕೆಗೆ ಸಮನಾದುದು. ಹೆಂಗಸಿನ ಬದುಕಿನಲ್ಲಿ ಅದು ತಾತ್ಕಾಲಿಕ ಅಗತ್ಯಕ್ಕೆ ಮುಗಿಯುವುದಿಲ್ಲ, ಮುಂದುವರೆಯುತ್ತದೆ. ಇಂದ್ರಿಯ ಭೋಗ ಎಂದು ಗಂಡಸರಂತೆ ಹೆಂಗಸರಿಗೆ ವಿಚಾರಿಸಲಾಗುವುದಿಲ್ಲ. ಹೀಗಾಗಿ ಗಂಡಸರು ಕಟ್ಟಿಕೊಟ್ಟ ಮಾದರಿಯನ್ನು ಹೆಂಗಸರು ಯಥಾವತ್ತಾಗಿ ತೆಗೆದುಕೊಳ್ಳಲಾಗುವುದಿಲ್ಲ. ಈ ಮಾತುಗಳು ಜೋಗತಿ, ಪಾತರದವಳು, ಬಸವಿ, ಸೂಳೆಯರಿಗೂ ಅನ್ವಯಿಸುತ್ತದೆ. ಜೋಗತಿ, ಪಾತರದವಳು, ಬಸವಿ, ಸೂಳೆ ಇವರೆಲ್ಲರೂ ಅತಿಯಾದ ಭೋಗಾಸಕ್ತಿ ಉಳ್ಳವರು ಎನ್ನುವ ಗ್ರಹಿಕೆಯನ್ನು ಸಮಾಜ ಕಟ್ಟಿಕೊಟ್ಟಿದೆ. ಅಂದರೆ ಗಂಡಸಿನಂತೆ ಅವರಿಗೆ ಕಾಮವೆನ್ನುವುದು ತಾತ್ಕಾಲಿಕ ಅಗತ್ಯವೆಂದೇ ನಂಬಿದೆ. ಆದರೆ ವಾಸ್ತವವಾಗಿ ಅವರು ಕಾಮವನ್ನು ಕೇವಲ ಇಂದ್ರಿಯಭೋಗ ಎನ್ನುವ ಅರ್ಥದಲ್ಲಿ ಸ್ವೀಕರಿಸುವುದಿಲ್ಲ. ಕಾರಣ, ನಿಸರ್ಗ ಹೆಣ್ಣಿಗೆ ಕೂಡ ಮಾಡಿದ ದೈಹಿಕ ಸಂರಚನೆಯೇ ಹಾಗಿದೆ.

ಗಂಡ ಹೆಂಡತಿಯಂತೆ ಜೋಗತಿಯರು, ಬಸವಿಯರು ತಮಗೆ ಒಪ್ಪಿಗೆಯಾದ ಪುರುಷನೊಡನೆ ಒಂದೇ ಸೂರಿನಡಿ ಬಾಳಲು ಸಮಾಜ ಅಧಿಕೃತ ಒಪ್ಪಿಗೆಯನ್ನು ನೀಡಿಲ್ಲ. ಇವರಿಬ್ಬರ ಮಾತೃ ಮೂಲ ಹಿನ್ನೆಲೆಯನ್ನು ಹೊಂದಿದ್ದರೂ ಪುರುಷ ಪ್ರಧಾನ ಸಂಸ್ಕೃತಿಯ ಪ್ರಭಾವದಡಿಯಲ್ಲಿ ಶೃಂಗಾರ ವಸ್ತುವಾಗಿದ್ದಾರೆ. ಅವಳಿಗೆ ಜೀವ, ಭಾವ, ಆತ್ಮಗೌರವಗಳು ಇರುತ್ತವೆಂದು ಪರಿಗಣಿಸುವುದೇ ಇಲ್ಲ. ರಂಭೆ-ಊರ್ವಸಿ ಸಿದ್ಧಾಂತದ ಸಾಕಾರ ರೂಪವೇ ಇವರಾಗಿದ್ದಾರೆ. ಜೋಗತಿಯರು, ಪಾತರದವರು ಹಾಗೂ ಅವರೊಂದಿಗೆ ಸಂಬಂಧವಿಟ್ಟುಕೊಂಡ ಪುರುಷರಲ್ಲಿ ಪ್ರೇಮವಿದೆ, ನೋವಿದೆ, ಅಪಮಾನವಿದೆ. ಪುರುಷಾಧಿಕಾರದ ಕ್ರಮವಿದೆ, ಸಾಂಸ್ಕೃತಿಕ ಯಜಮಾನಿಕೆಯ ಹೆಜ್ಜೆಗಳಿವೆ. ಜೋಗತಿ ಪಾತರದವಳು ತನ್ನನ್ನು ಅವಮಾನಕ್ಕೀಡು ಮಾಡುವ ಪುರುಷಾಧಿಕಾರದ ನೆಲೆಗಳೊಂದಿಗೆ ಅನಿವಾರ್ಯವಾಗಿ ರಾಜಿ ಮಾಡಿಕೊಂಡಿರುವಳು. ಆಗಾಧ ವಿಷಾದವನ್ನು ಅವಗಾಹನೆ ಮಾಡಿಕೊಂಡ ಅವಳು 'ಇದು ನನ್ನ ಕರ್ಮ' ಎಂದು ನಿಟ್ಟುಸಿರು ಬಿಡುತ್ತ, ವಸ್ತುಸ್ಥಿತಿಯೊಂದಿಗೆ ಅನಿವಾರ್ಯದ ಹೊಂದಾಣಿಕೆಯನ್ನು ಮಾಡಿಕೊಂಡಿರುವಳು. ಇವರ ಕುರಿತಂತೆ ಹಾಗೂ ಇವರು ಹೊಂದಿರುವ ಸಂಬಂಧಗಳ ಕುರಿತಂತೆ ಸಮಾಜ

ಹುಟ್ಟು ಹಾಕಿದ ನೇತ್ಯಾತ್ಮಕ ಲಕ್ಷಣಗಳನ್ನು ಇತ್ಯಾತ್ಮಕವಾಗಿಸುವ ಹಾಗೂ ಅದನ್ನು ತಾತ್ವೀಕರಿಸುವ ನಿಟ್ಟಿನಲ್ಲಿ ಆ ಸಂಬಂಧಗಳು ನನಗೆ ಕಂಡುಬರಲಿಲ್ಲ.

**ಆರ್ಥಿಕತೆ**

ಜೋಗತಿಯರ, ಪಾತರದವರ ಕೌಟುಂಬಿಕ ವ್ಯವಸ್ಥೆ ಮಾತೃಪ್ರಧಾನ ನೆಲೆಯನ್ನು ಹೊಂದಿಲ್ಲ. ಅದು ಮಾತೃವಂಶೀಯ-ವಾದದ್ದು. ಒಳಗಡೆ ಅದು ಪಿತೃಪ್ರಧಾನಸತ್ತೆಯನ್ನು ಎಚ್ಚರಿಕೆಯಿಂದ ಕಾಯ್ದುಕೊಂಡಿದೆ. ಇವರಿಗೆ ಹೊಲಮನೆಗಳಿದ್ದರೆ ಅವುಗಳ ಮೇಲುಸ್ತುವಾರಿಯನ್ನು ಇಟ್ಟುಕೊಂಡ ಗಂಡಸರೇ ನೋಡಿಕೊಳ್ಳುತ್ತಾರೆ. ಕುಟುಂಬಕ್ಕೆ ಅಗತ್ಯವಿದ್ದ ಕಾಳು-ಕಡಿ, ಪಾತ್ರೆ-ಪಗಡೆ, ಉಡುಗೆ-ತೊಡುಗೆ, ಈ ಗಂಡಸರೇ ತಂದು ಹಾಕುತ್ತಾರೆ. ಇವುಗಳಲ್ಲೇ ಜಾಣತನದಿಂದ ಸಂಸಾರ ತೂಗಿಸಿಕೊಂಡು, ಮಾತಾಪಿತೃಗಳಿಬ್ಬರ ಪಾತ್ರವನ್ನು ಏಕಕಾಲದಲ್ಲಿ ಒಬ್ಬಳೇ ನಿಭಾಯಿಸುತ್ತ ಬದುಕನ್ನು ಸಾಗಿಸುತ್ತಾಳೆ. ತಾಯಿ ಮೂಲದಿಂದ ಮಕ್ಕಳನ್ನು ಗುರುತಿಸುತ್ತಾರೆ ಎಂದಾಕ್ಷಣ ಹೆಮ್ಮೆ ಪಡಬೇಕಾಗಿಲ್ಲ. ಮಾತೃಪ್ರಧಾನ ವ್ಯವಸ್ಥೆಯಲ್ಲಿ ಲೈಂಗಿಕ ನಿರ್ಬಂಧ ಇಲ್ಲದೆ ಇರುವುದರಿಂದ ತಂದೆಯನ್ನು ಗುರುತಿಸುವುದು ಸಾಧ್ಯವಾಗುತ್ತಿರಲಿಲ್ಲ. ಆದರೆ ಪುರುಷ ಪ್ರಧಾನ ಸಾಂಸ್ಕೃತಿಕ ಮೌಲ್ಯಗಳೊಂದಿಗೆ ರಾಜಿಮಾಡಿಕೊಂಡು ಬದುಕುತ್ತಿರುವ ಇವರ ಮಕ್ಕಳಿಗೆ ತಂದೆಯಾರೆನ್ನುವುದು ಆತನಿಗಷ್ಟೇ ಅಲ್ಲ, ಇಡೀ ಸಮಾಜಕ್ಕೆ ಗೊತ್ತಿರುತ್ತದೆ. ಆದರೂ ಇವರ ಮಕ್ಕಳ ತಂದೆ ನೇಪಥ್ಯದಲ್ಲಿ ನಿಲ್ಲುತ್ತಾನೆ. ಪುರುಷ ಪ್ರಧಾನ ಹಾಗೂ ಊಳಿಗಮಾನ್ಯ ವ್ಯವಸ್ಥೆಯು ಇವರಿಗಾಗಿಯೇ ರೂಪಿಸಿದ ನಿಯಮವಿದಾಗಿದೆ. "ಸಮಾಜವು ಪರಿಗಣಿಸಿದ ನೈತಿಕಬಾಹಿರ ಮಕ್ಕಳಿಗೆ ತಾನೇ ತಂದೆ ಎನ್ನುವ ಸತ್ಯದ ಬಾಧ್ಯತೆಯಿಂದ ನುಣುಚಿಕೊಳ್ಳುವ, ತನ್ನಾಸ್ತಿ ಅವಳ ಮಕ್ಕಳಿಗೆ ಹಂಚಿ ಹೋಗದಂತೆ ನೋಡಿಕೊಳ್ಳುವ ರಾಜಕೀಯ ಕುತಂತ್ರ ಪಾತರದವರ ಮಾತೃಮೂಲ ಕುಟುಂಬದಲ್ಲಡಗಿದೆ."[೭] ಇದೇ ಮಾತು ಜೋಗತಿಯರ ಕುಟುಂಬಕ್ಕೂ ಅನ್ವಯಿಸುತ್ತದೆ. ಇವರೊಂದಿಗೆ ಸಂಬಂಧವಿಟ್ಟುಕೊಂಡ ಪುರುಷರಿಗೆ ಲೈಂಗಿಕ ಸುಖ ಬೇಕು, ಜವಾಬ್ದಾರಿ ಬೇಡ.

ಜೋಗತಿಯರಿಗೆ, ಪಾತರದವರಿಗೆ ಇಟ್ಟುಕೊಂಡವನು ಆರ್ಥಿಕ ಸಹಾಯವನ್ನು ತಾನೇ ಮಾಡುತ್ತಿರುವಂತೆ ನಟಿಸುತ್ತಾನೆ. ಹಣಗಳಿಸುತ್ತಾರಾದರೂ, ಇಲ್ಲೆಲ್ಲ ಅವರ ದುಡಿಮೆ ಅದೃಶ್ಯವಾಗಿ ನಿಲ್ಲುತ್ತದೆ. ಆರ್ಥಿಕವಾಗಿ ಪ್ರಬಲವಾದ ಆತನೇ ಅವಳ ಒಟ್ಟು ಕುಟುಂಬದ ಹೊಣೆ ಹೊತ್ತಂತೆ ನಟಿಸುತ್ತಾನೆ. ಸಮಾಜ ಅದು ಸತ್ಯವೆನ್ನುವಂತೆ ಪ್ರಚಾರ ನೀಡುತ್ತದೆ. ಹಣದ ಜೊತೆಗೆ ತನ್ನ ಪ್ರೀತಿಯನ್ನು ಅವಳಿಗೆ ದಾನವಾಗಿ ನೀಡುವಂತೆ ನಡೆದುಕೊಳ್ಳುತ್ತಾನೆ, ಅವಳ ಯೌವನ ಜಾರುವವರೆಗೆ. ಅದರಲ್ಲಿ ಪ್ರಾಮಾಣಿಕತೆಯಿರುವುದಿಲ್ಲ. ಈ ನಟನೆ ಕೂಡ ತಾತ್ಕಾಲಿಕವಾಗಿರುತ್ತದೆ. ಹಾಗೂ ಕೃತಕ-ವಾಗಿರುತ್ತದೆ.

**ಲಿಂಗಸಮಾನತೆ**

ಪುರುಷ ಈ ಬಗೆಯ ಲೈಂಗಿಕ ಸಂಬಂಧಗಳಲ್ಲಿ ಅನೇಕ ಸಂದರ್ಭಗಳಲ್ಲಿ ಲಿಂಗ ಸಮಾನತೆಯನ್ನು ನಟಿಸುತ್ತಾನೆ. ಇದು ನಿಜವೆಂದು ಆಕೆ ಲಿಂಗಸಮಾನತೆಯನ್ನು ಭ್ರಮಿಸುತ್ತಾಳೆ. ಬಹಳ ಕ್ರೂರವೆಂದರೆ ಖಾಸಗಿಯಾದ ಈ ಸಾಮಾಜಿಕ ಸಂಬಂಧವನ್ನು ಒಟ್ಟು ಸಮಾಜ ಉಪೇಕ್ಷಿಸುತ್ತದೆ, ಕಡೆಗಣಿಸಿ ನೋಡುತ್ತದೆ, ತಿರಸ್ಕರಿಸುತ್ತದೆ. ಅಂದರೆ ಒಟ್ಟು ನಟಿಸುವ, ಭ್ರಮಿಸುವ, ಉಪೇಕ್ಷಿಸುವ ಈ ಮೂರು ಪ್ರಕ್ರಿಯೆಗಳು ಲಿಂಗಸಮಾನತೆ-ಯನ್ನು ಎಲ್ಲೂ ನ್ಯಾಯೋಚಿತವಾಗಿ ಒಪ್ಪಿಕೊಳ್ಳುವುದೇ ಇಲ್ಲ ಎನ್ನುವ ಹಾಗೆ ಕಾಣುತ್ತದೆ.

ಗಂಡ ಹೆಂಡತಿಯನ್ನು ಶ್ರೇಷ್ಠ, ಕನಿಷ್ಠವೆಂದು ವಿಭಾಗಿಸುವ ಸಂಪ್ರದಾಯ ಆಚರಣೆಗಳು ಇವರ ಸಂಬಂಧಗಳಲ್ಲಿ ಬರುವುದಿಲ್ಲವಾದರೂ ಜೈವಿಕತೆಯನ್ನೇ ಕೇಂದ್ರ ಸಂಗತಿಗಳನ್ನಾಗಿಸಿಕೊಂಡು ಪ್ರಧಾನ, ಅಧೀನವಾಗಿಸುವ ಸಾಂಸ್ಕೃತಿಕ ಹಾಗೂ ಸಾಮಾಜಿಕ ಮೌಲ್ಯಗಳು ಜೋಗತಿಯರ, ಪಾತರದವರ ಬದುಕಿನಲ್ಲಿಯೂ ಪ್ರಧಾನ ಪಾತ್ರ ವಹಿಸುತ್ತದೆ. ಹೆಂಡತಿಯರಂತೆ ಇವರಲ್ಲಿಯೂ ಲೈಂಗಿಕ ನಿಷ್ಠೆಯನ್ನು ಅಪೇಕ್ಷಿಸುತ್ತಾರೆ. ವಿಧೇಯತೆಯನ್ನು ನಿರೀಕ್ಷಿಸುತ್ತಾರೆ. ಅವರ ಆಶೆ-ಆಕಾಂಕ್ಷೆ, ಕನಸು ಇತ್ಯಾದಿಗಳನ್ನೆಲ್ಲ ನಿಯಂತ್ರಣದಲ್ಲಿಟ್ಟಿರುತ್ತಾರೆ. ಒಂಟಿಯಾಗಿ ಹೊರಗೆ ಹೋಗುವಂತಿಲ್ಲ. ಬೇರೆ ಪುರುಷರೊಡನೆ ಮಾತನಾಡುವಂತಿಲ್ಲ. ಕಟ್ಟೆಗೆ ಕೂತು ಹರಟೆ ಹೊಡೆಯುವಂತಿಲ್ಲ. ತಲೆಯ ಮೇಲಿನ ಸೆರಗು ಕೆಳಗೆ ಜಾರುವಂತಿಲ್ಲ. ಅವನಿಗೆ ಎದುರಾಡುವಂತಿಲ್ಲ. ತಮ್ಮ ಘನತೆಯನ್ನು ಕಾಪಾಡಿಕೊಳ್ಳಲು ತಾವೇ ನಿರ್ಮಿಸಿಕೊಂಡ ಇಂತಹ ನೈತಿಕ ಮೌಲ್ಯಗಳನ್ನು ಜೋಗತಿಯರು, ಪಾತರದವರ ಮೇಲೆಯೂ ಆರೋಪಿಸುತ್ತಾರೆ. ಪುರುಷ ಪ್ರಧಾನ ಸಮಾಜದ ಸಾಂಸ್ಕೃತಿಕ ಚೌಕಟ್ಟಿನೊಳಗೆ ಬದುಕುವ ಅವರಿಗೆ ಈ ಬಂಧನಗಳಿಂದ ಮುಕ್ತಿ ಇಲ್ಲ. ಇವರೊಂದಿಗೆ ಸಂಪರ್ಕವಿಟ್ಟುಕೊಂಡ ಪುರುಷರು ತಮ್ಮ ಮೌಲ್ಯಗಳಿಗೆ ಬದ್ಧರಾಗಿಯೇ ಸಂಬಂಧ ಹೊಂದುತ್ತಾರೆ. ಹೊರನೋಟಕ್ಕೆ ವಿವಾಹಿತ ಸ್ತ್ರೀಗಿದ್ದಂತೆ ಸಾಂಸ್ಕೃತಿಕ ಕಟ್ಟಳೆಗಳು ಇಲ್ಲವೆನಿಸಿದರೂ, ಆಳದೊಳಗೆ ಇಂಥವೇ ನೀತಿ ನಿಯಮಗಳು ಇವರನ್ನಾಳುತ್ತಿರುತ್ತವೆ. ಹಾಗೂ ಪುರುಷನ ಅಹಂಕಾರವನ್ನು ಪೋಷಿಸುತ್ತಿರುತ್ತವೆ.

**ಅಡಿಟಿಪ್ಪಣಿ :**

೧. ನಟುವರಲ್ಲಿ ಹೆಣ್ಣು-ಗಂಡು ಎನ್ನುವ ತಾರತಮ್ಯ-ವರಿಲಿಲ್ಲ. ಅದು ಮಾತೃಪ್ರಧಾನ ಸಂಸ್ಕೃತಿಯುಳ್ಳದ್ದಾಗಿತ್ತು. ಕಾಡು ಬಿಟ್ಟು ನಾಡು ಸೇರಿದಾಗ ಪುರುಷ ಪ್ರಧಾನ ಸಂಸ್ಕೃತಿಗೆ ಒಳಗಾದರು(ವಿವರಣೆಗೆ ನೋಡಿ, ಡಾ.ಶೈಲಜ ಹಿರೇಮಠ, ಪಾತರದವರು,ಪು.೨೬,೨೭ ಕನ್ನಡ ವಿಶ್ವವಿದ್ಯಾಲಯ, ಹಂಪಿ).

೨. ಪುರುಷ ಪ್ರಧಾನ ಸಂಸ್ಕೃತಿಯಲ್ಲಿ ರೂಪ ಪಡೆದ ತಾಳಿಯನ್ನು ತಿರಸ್ಕರಿಸುವ ಇವರು ಮುತ್ತನ್ನು ಕಟ್ಟಿಕೊಳ್ಳುವರು.

೩. ಜನಸಾಮಾನ್ಯರಿರಬಹುದು, ವಿದ್ವಾಂಸರಿರಬಹುದು, ಬಸವಿಯರನ್ನು ಮತ್ತು ಜೋಗತಿಯರನ್ನು ಸಾಮಾನ್ಯೀಕರಿಸಿ ಬಸವಿಯರೆಂದೇ ಗುರುತಿಸುವರು. ನಾನು ಕೂಡಾ 'ಬಸವಿಯರು' ಎನ್ನುವ ಲೇಖನವನ್ನು ಇವರಿಬ್ಬರನ್ನು ಸಮೀಕರಿಸಿಯೇ ಬರೆದಿದ್ದೆ. ಇದು ಮಹಿಳಾ ಅಧ್ಯಯನ ಪತ್ರಿಕೆಯಲ್ಲಿ ಪ್ರಕಟವಾಗಿತ್ತು ಕೂಡಾ. ಕ್ಷೇತ್ರಕಾರ್ಯಾಧ್ಯಯನದ ಆಳಕ್ಕಿಳಿದಂತೆಲ್ಲಾ ಇವೆರಡೂ ಭಿನ್ನ ಭಿನ್ನ ಸಾಂಸ್ಕೃತಿಕ ಕಥನವನ್ನು ಹೊಂದಿರುವುದು ಗೊತ್ತಾಯಿತು. ಜೋಗತಿ ಪರಂಪರೆ, ಬಸವಿ ಸಂಪ್ರದಾಯಕ್ಕಿಂತ ಸಂಪೂರ್ಣವಾಗಿ ಭಿನ್ನವಾದದ್ದು. ಶಂಖ, ಚಕ್ರ, ಪದ್ಮ ಈ ಮೂರು ಮುದ್ರೆಗಳನ್ನು ಹಾಕಿಸಿಕೊಳ್ಳುವ 'ಬಸವಿ' ವೈಷ್ಣವ ಸಂಸ್ಕೃತಿಯಲ್ಲಿ ಕಾಣಿಸುತ್ತಾಳೆ. ಮಾಧ್ವ ಸಂಪ್ರದಾಯದಲ್ಲಿ ಕಾಣಿಸಿಕೊಳ್ಳುವ ಅಂಜನೇಯ ದೇವಸ್ಥಾನಗಳಿಗೆ ಮಾತ್ರ ಬಸವಿಯರನ್ನು ಬಿಡುತ್ತಾರೆ. ಕರಿಮಣಿಯ ಜೊತೆಗೆ ಒಂಟಿ ಹನುಮತಾಳಿಯನ್ನು ಕಟ್ಟಿಕೊಳ್ಳುವ ಇವರು ಪುರುಷ ಪ್ರಧಾನ ಮೌಲ್ಯಗಳಲ್ಲಿ ರೂಪಪಡೆದವರು. ಹದಿನೈದನೆಯ ಶತಮಾನದಲ್ಲಿಯ ವಿಜಯನಗರದ ಕೃಷ್ಣದೇವರಾಯನ ಕಾಲಾವಧಿಯಲ್ಲಿಯೇ 'ಬಸವಿ' ಸಂಪ್ರದಾಯ ಅಸ್ತಿತ್ವಕ್ಕೆ ಬಂದಿತು.

೪. ಆರ್. ಇಂದರಾ, ಮಹಿಳಾ ಸಮಾಜ ಸಂಸ್ಕೃತಿ, ಪುಟ.೨೮, ಕನ್ನಡ ವಿ.ವಿ, ಪ್ರಸಾರಾಂಗ ೨೦೦೨

೫. ಉಧೃತ,ವೆಂ.ವನಜ, ಕುಟುಂಬ ಮತ್ತು ಮಹಿಳೆ, ಪುಟ.೪೮, ಮಹಿಳಾ ಅಧ್ಯಯನ ಸಂಪುಟ - ೨, ಸಂಚಿಕೆ-೨, ಜುಲೈ ೨೦೦೦

೬. ವಿವರಣೆಗೆ ಗಮನಿಸಿ : ಡಾ.ಶೈಲಜ ಹಿರೇಮಠ, ಪಾತರದವರು, ಪುಟ.೫೧-೫೭, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೭. ಅದೇ ಪು.೬೫

೮. ಕೆಲವು ಸಾಮಾಜಿಕ ಕಾರಣಗಳಿಂದಾಗಿ ಸಂದರ್ಶನಕಾರರ ವಿವರಗಳನ್ನು ಕೊಡುವುದನ್ನು ಉದ್ದೇಶ ಪೂರ್ವಕವಾಗಿಯೇ ಕೈಬಿಟ್ಟಿರುವೆ.

ಸ್ತ್ರೀವಾದವು ಬ್ರಾಹ್ಮಣ ಪುರುಷಾಧಿಪತ್ಯದ ರಾಜಕೀಯ ಮತ್ತು ಆರ್ಥಿಕ ಪ್ರಾಬಲ್ಯದ ವಿರುದ್ಧ ಯಾವುದೇ ನಿಲುವನ್ನು ತೆಗೆದುಕೊಳ್ಳಲು ನಿರಾಕರಿಸುತ್ತದೆ. ಈ ಚಳುವಳಿಯು ರಾಜಕೀಯ ಕ್ರಿಯಾಶೀಲತೆಯ ಬಗ್ಗೆ ಗುಮಾನಿಯನ್ನು ವ್ಯಕ್ತಪಡಿಸುತ್ತದೆ. ಆದ್ದರಿಂದ ನಿಜವಾಗಲೂ ಅಧಿಕಾರದ ಸಂಬಂಧಗಳು ಬಂದಾಗ, ರಾಜಕೀಯ ಕ್ರಿಯಾಶೀಲತೆ ಸಾಮಾಜಿಕ ಕ್ರಿಯಾಶೀಲತೆಯಾಗುತ್ತದೆ ಎಂಬುದನ್ನು ಗುರುತಿಸುವಲ್ಲಿ ಸೋಲುತ್ತದೆ. ಪ್ರಚಲಿತ ರಾಜಕೀಯ ವ್ಯವಸ್ಥೆಯಲ್ಲಿ ಹಿತಾಸಕ್ತಿ ಹೊಂದಿರುವವರು ಮಾತ್ರ ಅಂಥ ಐಷಾರಾಮವನ್ನು ಬಯಸುತ್ತಾರೆ. ಇದು ಮನು ಸೂತ್ರಗಳನ್ನೇ ಪರೋಕ್ಷವಾಗಿ ಸಮ್ಮತಿಸುತ್ತದೆ.

ಮೀಸಲಾತಿಯೊಳಗೆ ಹಿಂದುಳಿದ, ಅಲ್ಪಸಂಖ್ಯಾತ ಮಹಿಳೆಯರಿಗೆ ಮೀಸಲಾತಿ ನೀಡಲು ಬ್ರಾಹ್ಮಣ ಸ್ತ್ರೀವಾದಿ ನಾಯಕತ್ವದ ವಿರೋಧವಿರುವುದರಿಂದ ಸ್ತ್ರೀವಾದದ ಬಗ್ಗೆ ಬಹುಜನ ಮಹಿಳೆಯರು ಭ್ರಮೆ ನಿರಸನಗೊಂಡಿದ್ದಾರೆ.

ಸ್ತ್ರೀವಾದದ ಜಾತಿ ಪ್ರಶ್ನೆ
ಪ್ರಗತಿ ಪರರ ಡೋಂಗಿತನ

**ರೇಖಾ ಠಾಕೂರ್**

ಸಂವಾದ ಮೇ ಸಂಚಿಕೆ

ಮಾನಸ ಪತ್ರಿಕೆ ಯಾವ ಸಂಸ್ಥೆಯ, ಸರ್ಕಾರದ ನೆರವಿಲ್ಲದೇ ಪ್ರಕಟವಾಗುತ್ತಿರುವ ಮಹಿಳೆಯರೇ ನಡೆಸುತ್ತಿರುವ ಸ್ವಾಯತ್ತ ಪತ್ರಿಕೆ. ಓದುಗರು ಹಾಗೂ ಸಹೃದಯರು ನೀಡುವ ಆರ್ಥಿಕ ನೆರವೇ ಪತ್ರಿಕೆಯ ಜೀವಾಳ. ಚಂದಾದಾರರಿಗೆ ಚಂದಾ ಅವಧಿ ಮುಕ್ತಾಯವಾದುದರ ಬಗ್ಗೆ ಸೂಚನೆಯನ್ನು ನೀಡಲಾಗುತ್ತದೆ. ಓದುಗರು ತಕ್ಷಣ ಚಂದಾ ನವೀಕರಿಸಬೇಕೆಂದು ಕೋರುತ್ತೇವೆ. ಪತ್ರಿಕೆಯು ಉಳಿದು ಬೆಳೆಯಬೇಕಾದರೆ ಓದುಗರ ಸಹಕಾರ ಅತ್ಯಗತ್ಯ.

**ವಾರ್ಷಿಕ ಚಂದಾ : 100 ರೂ**

**ಸಂಸ್ಥೆಗಳಿಗೆ : 150 ರೂ**

ಸಂ.ಮಂಡಳಿ

REGD No. : CPMG/KA/BGE/289/2003 - 05

BOOK-POST
PRINTED MATTER

ವಿಳಾಸ :
ಮಾನಸ
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು - 560 067

B.N. Sumithra Bai,
509, 16th Main,
Banashankari 1st Stage,
Srinagar, Bangalore – 560 050.